# ಬೃಹಚ್ಚರಣ

**ಸಂಪಾದಕ ಸಮಿತಿ**

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಕೆ.ಸಿ. ನಟರಾಜನ್ | ಸಂಚಾಲಕರು |
| ವೈ.ಜಿ. ಗಿರಿಶಾಸ್ತ್ರಿ | ಸದಸ್ಯರು |
| ಕೆ.ಎಸ್. ಮಧುಸೂದನ | ಗೌ॥ ಸಂಪಾದಕ |

ಸಂಪುಟ : 3 ಸಂಚಿಕೆ : 4 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಅಕ್ಟೋಬರ್–ಡಿಸೆಂಬರ್ 2013




ಅರ್ಪಣೆ

ಬೃಹಚ್ಚರಣ

ಈ ಸಂಚಿಕೆಯನ್ನು ನಮ್ಮ ಜನಾಂಗದ ಹಿರಿಯ **ಸಂಣೆ ಸೂರಪ್ಪ** ಅವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಿದೆ.

## ಸಂಪಾದಕೀಯ

ನಮ್ಮ ಜನಾಂಗದ ಎಲ್ಲ ಬಂಧು–ಭಗಿನಿಯರಿಗೆ ಹೊಸ ವರ್ಷದ ಶುಭಾಶಯಗಳು.

ಇದು 'ಬೃಹಚ್ಚರಣ' ಪತ್ರಿಕೆಯ ಹತ್ತನೆಯ ಸಂಚಿಕೆ. ಇದನ್ನು ನಿಮ್ಮ ಕೈಯಲ್ಲಿರಿಸಲು ಸಂತಸವಾಗುತ್ತಿದೆ. ಒಂದು ಪತ್ರಿಕೆ ತನ್ನ ಕಾಲ ಘಟ್ಟದಲ್ಲಿ ಮೂರು ವರ್ಷಗಳ ಕಾಲ ನಡೆಯುವುದು ಅಷ್ಟು ಸುಲಭವಲ್ಲ. ಇದಕ್ಕೆ ಕಾರಣ ನೀವು.

25, 50, 100ರ ಸಂಖ್ಯೆಯನ್ನು ನಮ್ಮ ಪತ್ರಿಕೆಯು ದಾಟಲಿ ಎಂಬ ಆಶಯದೊಂದಿಗೆ ಮತ್ತೊಮ್ಮೆ ಎಲ್ಲರಿಗೂ ಶುಭಾಶಯಗಳನ್ನು ಕೋರುತ್ತೇನೆ.



■ ಕೆ. ಎಸ್. ಮಧುಸೂದನ

**ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ ದಶಮ ವಿಶೇಷ ಸಂಚಿಕೆ**

## ಅಧ್ಯಕ್ಷರ ನುಡಿ

*ಆತ್ಮೀಯ ಬಂಧುಗಳಿಗೆ ನಮ್ಮಸ್ಕಾರ.*

ನಮ್ಮ ಸಂಘವು ದಿನೇ ದಿನೇ ಬೆಳೆಯುತ್ತಿರುವುದಕ್ಕೆ ತಮ್ಮ ಸಹಕಾರ ಹಾಗೂ ಭಾಗವಹಿಸುವಿಕೆಯು ಚೈತನ್ಯ ನೀಡಿ, ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪ್ರೇರೇಪಿಸುತ್ತಿದೆ. ಅದಕ್ಕಾಗಿ ಧನ್ಯವಾದಗಳು.

ತಮ್ಮ ಸಲಹೆಯಂತೆ 2–10–2013ರಂದು ಒಂದು ದಿನದ ಧಾರ್ಮಿಕ ಕ್ಷೇತ್ರದ ಪ್ರಥಮ ಪ್ರವಾಸವನ್ನು ತಲಕಾಡು, ಟಿ–ನರಸೀಪುರಕ್ಕೆ ಏರ್ಪಡಿಸಲಾಗಿತ್ತು. ಇದರಲ್ಲಿ ಪಾಲ್ಗೊಂಡ ನಮ್ಮ ಬಂಧುಗಳು ಪ್ರವಾಸದ ಸವಿ ಉಂಡು ಮತ್ತೆಮತ್ತೆ ಇಂತಹ ಪ್ರವಾಸವನ್ನು ಏರ್ಪಡಿಸಲು ಒತ್ತಡ ತರುತ್ತಿದ್ದಾರೆ. ಇದರ ಯಶಸ್ಸಿಗೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

1–12–2013ರಂದು ನಾಗಕ್ಷೇತ್ರ, ಕಿತ್ತಗಾನಹಳ್ಳಿಯಲ್ಲಿ "ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ"ದಲ್ಲಿ ಸುಮಾರು 45 ದಂಪತಿಗಳು ಸಾಮೂಹಿಕವಾಗಿ ಭಾಗವಹಿಸಿ, ಭಕ್ತಿ, ಶ್ರದ್ಧೆ ಹಾಗೂ ವಿಜೃಂಭಣೆಯಿಂದ ಸಮಾರಂಭವನ್ನು ನಡೆಸಿಕೊಟ್ಟಿದ್ದು ಅವಿಸ್ಮರಣೀಯ. ಸಂಘದ ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿ ಹಾಗೂ ಶ್ರೀ ಎಸ್. ಸತ್ಯನಾರಾಯಣರವರ ಸ್ವಯಂಸೇವಕ ತಂಡವು ಸುವ್ಯವಸ್ಥಿತವಾಗಿ ಸಮಾರಂಭವನ್ನು ರೂಪಿಸಿದ್ದು, ಪ್ರತಿಯೊಂದು ಹಂತದಲ್ಲೂ ಅಚ್ಚುಕಟ್ಟುತನ ಎದ್ದುಕಾಣಿಸುತ್ತಿತ್ತು. ಇದು ಭಾಗವಹಿಸಿದ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಈ ಕಾರ್ಯಕ್ರಮಕ್ಕೆ ಸಹಕರಿಸಿದ ಪ್ರತಿಯೊಬ್ಬರಿಗೂ ವಂದನೆಗಳು.

ಈ ಸಂದರ್ಭದಲ್ಲಿ ಲಾಡು ವಿತರಿಸಿದ ಶ್ರೀ ಸತ್ಯನಾರಾಯಣ ದಂಪತಿಗಳಿಗೆ ಹಾಗೂ ಒಂದು ಲಕ್ಷ ರೂಪಾಯಿ ದೇಣಿಗೆ ನೀಡಿದ ಶ್ರೀ ಶ್ರೀಕಂಠೇಶ್ವರ್ ಎಸ್. ದಂಪತಿಗಳಿಗೆ ಧನ್ಯವಾದಗಳು.

75 ವಸಂತಗಳು ತುಂಬಿರುವ ಹಿರಿಯ ಚೇತನಗಳಿಗೆ ಗೌರವಾರ್ಪಣೆ ಹಾಗೂ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯ ಪ್ರತಿಭಾ ವಿದ್ಯಾರ್ಥಿಗಳಿಗೆ ಸನ್ಮಾನ ಇದೇ ಸಂದರ್ಭದಲ್ಲಿ ನಡೆದಿದ್ದು ಸಂತೋಷದ ವಿಷಯ. ಮುಂದೆ, ಸಂಘವು ಪದವಿ ಪಡೆದ ನಮ್ಮ ಮಕ್ಕಳನ್ನು ಸನ್ಮಾನಿಸುವ ಬಗ್ಗೆ ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನಿಸಲಿದೆ.

5–3–2014 ಬುಧವಾರದಂದು ಕಿತ್ತಗಾನಹಳ್ಳಿ ನಾಗಕ್ಷೇತ್ರದಲ್ಲಿ ನಾಗಾರಾಧನಾ ಮಹೋತ್ಸವವು ನಡೆಯಲಿದ್ದು, ತಾವು ತಮ್ಮ ಕುಟುಂಬದವರೊಂದಿಗೆ ಕಾರ್ಯಕ್ರಮ ದಲ್ಲಿ ಭಾಗವಹಿಸಲು ಸಂಘದ ಪರವಾಗಿ ಸ್ವಾಗತಿಸುತ್ತೇವೆ. ದಾನಿಗಳಿಗೂ, ಪ್ರಾಯೋಜಕರಿಗೂ ಸ್ವಾಗತಿಸುತ್ತ ತಮ್ಮ ಸಹಕಾರ ಬಯಸುತ್ತೇನೆ.

ಮುಂಬರುವ ಸಂಕ್ರಾಂತಿ, ಶಿವರಾತ್ರಿ ಹಾಗೂ ಯುಗಾದಿ ಹಬ್ಬಗಳಿಗೆ ನಮ್ಮ ಸಂಘದ ಶುಭಾಶಯಗಳು. ನಿಮಗೆಲ್ಲಾ ಒಳ್ಳೆಯದಾಗಲಿ–ಒಳ್ಳೆಯದೇ ಆಗುತ್ತದೆ.



■ ಎಸ್. ಸೋಮಸುಂದರ


## ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷರು : **ಎಸ್. ಸೋಮಸುಂದರ, 9900113298**
ಉಪಾಧ್ಯಕ್ಷರು : **ಕೆ.ಬಿ. ಮುರಳಿ, 9448044164**
**ಕೆ. ಮಂಜುನಾರಾಯಣ್, 9886114279**
ಕಾರ್ಯದರ್ಶಿ : **ವಿ.ಎಸ್. ಮಣಿ, 9845055582**
ಸಹಕಾರ್ಯದರ್ಶಿ : **ವಿ. ಅರುಣ, 9880166001**
ಖಜಾಂಚಿ : **ಎಸ್. ಸತ್ಯನಾರಾಯಣ, 9980945699**
ಲೆಕ್ಕಪರಿಶೋಧಕರು : **ಎಚ್.ಕೆ. ಶಶಿಧರ್, 9845173766**

ಸದಸ್ಯರು : **ಆರ್.ಎ. ಈಶ್ವರನ್, ಟಿ.ಎಸ್. ಮಣಿ, ಎಸ್. ಶ್ರೀನಿವಾಸನ್, ಆರ್. ಗೋಪಾಲಕೃಷ್ಣ, ಎಸ್. ಸಿ. ಶ್ರೀನಿವಾಸ, ಬಿ. ಶ್ರೀಧರ್, ಕೆ. ಜಿ. ವೆಂಕಟೇಶ್, ಸರಸ್ವತಿ ನಟರಾಜನ್, ಎ.ವಿ. ಮಂಜುನಾಥ, ಟಿ.ಪಿ. ಸೂರ್ಯನಾರಾಯಣ, ಆರ್. ಗಣೇಶ ಶ್ರೀಧರ್, ಟಿ.ಎಸ್. ನಾಗೇಶ್, ಟಿ.ಎಸ್. ರಮೇಶ್, ಕೆ.ಸಿ. ನಟರಾಜನ್**

ಸಲಹೆ : **ಕೆ.ಎಸ್. ಮಧುಸೂದನ, 9902145359**

## ಹೊಸ ಸದಸ್ಯರು





**ಪೋಷಕರು**

**ಶ್ರೀ ಜಿ.ಎನ್. ಪ್ರಸಾದ್** (P-074)
**ಶ್ರೀಮತಿ ಲಲಿತಾ ರಮೇಶ್** (P-075)

**ಸದಸ್ಯರು**

**ಶ್ರೀ ಹೆಚ್.ಪಿ. ವೇಣುಗೋಪಾಲ** (M-413)
**ಶ್ರೀ ಎ.ವಿ. ಗಣೇಶರಾಮ್** (M-414)
**ಶ್ರೀ ಟಿ.ಎಲ್. ಚಂದ್ರು** (M-415)
**ಶ್ರೀ ಪ್ರವೀಣ್ ಅನಂತ್** (M-416)
**ಶ್ರೀಮತಿ ರಾಜೇಶ್ವರಿ ಅಶೋಕ** (M-417)
**ಶ್ರೀ ಚಂಪಕಧಾಮ ಎಸ್.** (M-418)
**ಶ್ರೀ ವೆಂಕಟೇಶಮೂರ್ತಿ** (M-419)

## ಮದುವೆ ಬೆಳ್ಳಿಹಬ್ಬ

ಸಂಘದ ಸದಸ್ಯ **ಶ್ರೀ ಎಸ್. ನಿರಂಜನ್** ಹಾಗೂ **ಶ್ರೀಮತಿ ಕಸ್ತೂರಿರವರ 'ಮದುವೆ ಬೆಳ್ಳಿಹಬ್ಬ'** ದಿನಾಂಕ 1–11–2013ರಂದು ಕೇಂಗರಿಯ 'ಗಾಯತ್ರಿ ಭವನದಲ್ಲಿ' ನೆರೆವೇರಿತು. ಇವರಿಗೆ 'ಬೃಹಚ್ಚರಣ' ಸಂಘವು ಶುಭ ಹಾರೈಸುತ್ತದೆ.

## ಸ್ವಯಂಪ್ರೇರಿತ ವಂತಿಗೆ

26–05–2013ರ ಸರ್ವ ಸದಸ್ಯರ ಸಭೆಯಲ್ಲಿ ಸದಸ್ಯರ ಸೂಚನೆಯ ಮೇರೆಗೆ ಸಂಘ ಬೆಳೆಯಬೇಕಾದಲ್ಲಿ ಆರ್ಥಿಕತೆ ಮುಖ್ಯ ಎಂದು ಅಭಿಪ್ರಾಯ ಬಂದಿದ್ದು, ಕೆಲವು ಸದಸ್ಯರು ಸ್ವಯಂ ಪ್ರೇರಿತವಾಗಿ ವಾರ್ಷಿಕ 250/– ರೂ.ಗಳನ್ನು ಕೊಡಲು ಮುಂದಾಗಿದ್ದಾರೆ. ಇದು ಸ್ವಾಗತಾರ್ಹ. ಅಭಿವೃದ್ಧಿವಂತಿಗೆಯನ್ನು ಸ್ವಇಚ್ಛೆಯಿಂದ ಕೊಡುವ ಸದಸ್ಯರ ಹೆಸರುಗಳನ್ನು ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ನಿಮ್ಮಿಂದ ಸಹಕಾರವಿದೆ ಎಂದು ಅಧ್ಯಕ್ಷರು ಭಾವಿಸಿರುತ್ತಾರೆ.

## ಶ್ರೀ ಸಂಣೆ ಸೂರಪ್ಪ

**ಶ್ರೀ ಸಂಣೆ ರಾಮಚಂದ್ರರಾವ್ ಹಾಗೂ ಆದಿಲಕ್ಷಮ್ಮ ಅವರ ಪ್ರಥಮ ಪುತ್ರರಾಗಿ 3–4–1924ರಂದು ಜನಿಸಿದ ಶ್ರೀ ಸಂಣೆ ಸೂರಪ್ಪನವರು ಅಂದಿನ ಸಾತ್ತ್ವಿಕ ಸಾಧು ಸಜ್ಜನರಾಗಿದ್ದ ಸಂಣೆ ಹನುಮಂತರಾವ್ ಅವರ ಪೌತ್ರರು. 1941ರಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿದ ಶ್ರೀಯುತರು ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ವಿದ್ಯಾರ್ಥಿದೆಸೆಯಲ್ಲೇ ತಮ್ಮನ್ನು ತೊಡಗಿಸಿ ಕೊಂಡಿದ್ದರು.**

**ತಮ್ಮ 19ನೇ ವಯಸ್ಸಿನಲ್ಲಿಯೇ ಬೆಂಗಳೂರಿನ ಪ್ರತಿಷ್ಠಿತ ಕೈಗಾರಿಕಾ ವಲಯಕ್ಕೆ ತಾಂತ್ರಿಕ ಸಲಕರಣೆ ಸರಬರಾಜುದಾರರಾದ 'ಗಲಿಯಾ ಕೋಟವಾಲ' ಕಂಪನಿಗೆ ಸೇರಿ ನಿಧನರಾಗುವವರೆಗೂ ಆ ಸಂಸ್ಥೆಯ ಸಲಹೆಗಾರರಾಗಿ ಸೇವೆ ಸಲ್ಲಿಸಿದರು. ಈ ಅವಧಿಯಲ್ಲೇ ಶ್ರೀಯುತರು ಕರ್ನಾಟಕದ ಸಹಕಾರಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಾ ಕೆ.ಆರ್.ಮಾರುಕಟ್ಟೆಯಲ್ಲಿದ್ದ ಬಾಂದುನವರ ಕೋ–ಆಪ್ ಸೊಸೈಟಿಯ ಕಾರ್ಯದರ್ಶಿಗಳಾಗಿದ್ದಾಗ 'ಬೃಹಚ್ಚರಣ' ಬಂಧುಗಳನ್ನೆಲ್ಲಾ ಸದಸ್ಯರನ್ನಾಗಿಸಿ ಒಗ್ಗೂಡಿಸುವ ಪ್ರಯತ್ನ ಮಾಡಿದರು. 'ಬೃಹಚ್ಚರಣ'ರ ಸಂಘಟನೆಯಲ್ಲಿ ತೊಡಗಿದ್ದ ತಮ್ಮ ಸೋದರಮಾವ ಮತ್ತು ಮಾವನವರಾದ ಅಲಸೂರು ಶ್ರೀಕಂಠಯ್ಯನವರ ಹಾಗೂ ಉಳಿದ ಹಿರಿಯ ಕುಲಬಾಂಧವರ ಜತೆ ಬೃಹಚ್ಚರಣ ಸಂಘವನ್ನು ಕಟ್ಟಿಬೆಳೆಸಿದರು.**

**ಶ್ರೀಯುತರು 24–10–2013ರಂದು ತಮ್ಮ ಪತ್ನಿ ಪದ್ಮಾವತಮ್ಮ, ಪುತ್ರರು ಎಸ್. ಸೋಮಸುಂದರ, ಎಸ್. ಚಂದ್ರಶೇಖರ್ ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಈ ವಿಶೇಷ ಸಂಚಿಕೆಯನ್ನು ಆದರಾಭಿಮಾನಗಳಿಂದ ಶ್ರೀಯುತರಿಗೆ ಅರ್ಪಿಸಿದ್ದೇವೆ.**

■ ಕೆ. ಎಸ್. ಮಧುಸೂದನ



## ಶುಭ ವಿವಾಹ

**ಶ್ರೀ ವೈ.ಜಿ. ಗಿರಿಶಾಸ್ತ್ರಿ** ಮತ್ತು **ಶ್ರೀಮತಿ ಸರಸ್ವತಿ ಗಿರಿಶಾಸ್ತ್ರಿಯವರ** ಪುತ್ರ **ಚಿ॥ ವೈ.ಜಿ. ಚೈತನ್ಯಕುಮಾರ್** ಹಾಗೂ **ಚಿ॥ ಸೌ॥ ವಂದಿತಾ** ಶ್ರೀವತ್ಸರವರ ವಿವಾಹ ಮಹೋತ್ಸವವು 24–10–2013ರಂದು ನೆರವೇರಿತು. ನೂತನ ವಧು–ವರರಿಗೆ 'ಬೃಹಚ್ಚರಣ' ಸಂಘವು ಶುಭ ಹಾರೈಸುತ್ತದೆ.

✤ ✤

**ಶ್ರೀ ಈಶ್ವರಮೂರ್ತಿ ಬಿ.ಎ.** ಹಾಗೂ **ನಾಗರತ್ನ** ದಂಪತಿಗಳು ತಮ್ಮ ಮಗಳು **ಚಿ॥ ಕವಿತಳನ್ನು ಶ್ರೀ ಎ.ಎಸ್. ಗುಂಡಪ್ಪ ಸ್ವರ್ಣಲತ** ದಂಪತಿಗಳ ಪುತ್ರ **ಚಿ॥ ಶಿವಕುಮಾರ್**ಗೆ ಕೊಟ್ಟು 28–11–2013ರಂದು ವಿವಾಹ ನೆರೆವೇರಿಸಿದರು. ನೂತನ ವಧುವರರಿಗೆ 'ಬೃಹಚ್ಚರಣ' ಸಂಘ ಶುಭ ಹಾರೈಸುತ್ತದೆ.

✤ ✤

**ಶ್ರೀ ಚಂದ್ರಮೌಳಿ** ಹಾಗೂ **ಶ್ರೀಮತಿ ಶೈಲಜಾರವರ** ಪುತ್ರ **ಚಿ॥** ಸಿ. **ಕಾರ್ತಿಕ್** ಮತ್ತು **ಶ್ರೀ ಎಸ್. ಗುರುಪ್ರಸಾದ್** ಹಾಗೂ **ಶ್ರೀಮತಿ ಸವಿತರವರ** ಪುತ್ರಿ **ಚಿ॥ ಸೌ॥ ಜಿ. ಶ್ವೇತರವರ** ವಿವಾಹ 22–11–2013ರಂದು ಬೆಂಗಳೂರಿನಲ್ಲಿ ನಡೆಯಿತು. ನೂತನ ವಧು–ವರರಿಗೆ 'ಬೃಹಚ್ಚರಣ' ಸಂಘ ಶುಭ ಹಾರೈಸುತ್ತದೆ.

## 2-10-2013ರ ಪ್ರವಾಸ (ಟಿ.ನರಸೀಪುರ ಹಾಗೂ ತಲಕಾಡು)















# ನವಧಾ ಭಕ್ತಿ

ದೈವಕ್ಕೆ ಜಾತಿ ಕುಲ ಭೇದಗಳಿಲ್ಲ. ಹಾಗೆಯೇ ಭಕ್ತನಿಗೆ ಕೂಡ ಜಾತಿ ಕುಲ ಭೇದಗಳಿಲ್ಲ.

ತಂದೆಯ ಮಾತಿನಂತೆ ಶ್ರೀರಾಮಚಂದ್ರ ಪ್ರಭುವು ಸೀತಾಲಕ್ಷ್ಮಣ ಸಮೇತನಾಗಿ 14 ವರುಷ ವನವಾಸಕ್ಕೆ ಹೊರಡುತ್ತಾನೆ.

ಕಾಡಿನಲ್ಲಿ ಸೀತಾಪಹರಣವಾಗುತ್ತದೆ. ರಾವಣನು ಸನ್ಯಾಸಿ ವೇಷದಲ್ಲಿ ಬಂದು ಆಕೆಯನ್ನು ಅಪಹರಿಸಿ ಲಂಕೆಗೆ ಒಯ್ಯುತ್ತಾನೆ.

ರಾಮ ಲಕ್ಷ್ಮಣರು ಸೀತೆಯನ್ನು ಹುಡುಕುತ್ತಾ ಅಲೆದಾಡಿ, ಎಲ್ಲೂ ಸೀತೆಯನ್ನು ಕಾಣದೆ, ನಿರಾಸೆ, ಆಯಾಸ, ಬಾಯಾರಿಕೆಗಳಿಂದ ಬರುತ್ತಿರುವಾಗ ಅವರಿಗೆ ಪಂಪಾನದಿ ಸಿಗುತ್ತದೆ. ಆ ನದಿಯ ನೀರನ್ನು ಕುಡಿದು ದಾಹವನ್ನು ಪರಿಹರಿಸಿಕೊಂಡು ಸಮೀಪದಲ್ಲಿರುವ ಮತಂಗಾಶ್ರಮವನ್ನು ಪ್ರವೇಶಿಸುತ್ತಾರೆ.

ಅಲ್ಲಿ ಇವರಿಗಾಗಿಯೇ ಬಹಳ ವರ್ಷದಿಂದ ಕಾದಿದ್ದ ಶಬರಿ ಎಂಬ ಬೇಡರ ಜಾತಿಯ ಸ್ತ್ರೀಯನ್ನು ನೋಡುತ್ತಾರೆ. ಶಬರಿಯು ರಾಮನಿಗಾಗಿ ಹಣ್ಣುಗಳನ್ನು ಸಂಗ್ರಹಿಸಿ ತಂದಿರುತ್ತಾಳೆ. ಶ್ರೀರಾಮನನ್ನು ಕಂಡೊಡನೆ ಶಬರಿಯು ರಾಮಲಕ್ಷ್ಮಣರ ಪಾದಕ್ಕೆ ವಂದಿಸಿ ಪಾದ್ಯಾದಿಗಳಿಂದ ಉಪಚರಿಸುತ್ತಾಳೆ.

ತಾನು ಆರಿಸಿತಂದಿದ್ದ ಹಣ್ಣುಗಳನ್ನು ಕಚ್ಚಿ, ರುಚಿ ನೋಡಿ ಸಿಹಿಯಾದ ಹಣ್ಣುಗಳನ್ನು ಮಾತ್ರ ಶ್ರೀರಾಮನಿಗೆ ನೀಡುತ್ತಾಳೆ. ಅವಳ ಪ್ರೀತಿಗೆ ಮೆಚ್ಚಿ ಶಬರಿ ಕೊಟ್ಟ ಎಂಜಲ ಹಣ್ಣುಗಳನ್ನೇ ತಿಂದು ಅವಳು ಕೃತಾರ್ಥಳಾಗುವಂತೆ ಮಾಡಿದ ಪ್ರಭು ಶ್ರೀರಾಮಚಂದ್ರ. ಅವಳ ಸತ್ಕಾರದಿಂದ ಸಂತಸಪಟ್ಟ ಶ್ರೀರಾಮನು ಶಬರಿಗೆ ನಿನಗೇನು ಬೇಕು ಹೇಳು ಎಂದು ಕೇಳಿದಾಗ, ಶಬರಿಯು ಪ್ರಭೂ, ರಾಮಚಂದ್ರ ನಾನು ಅತ್ಯಂತ ನೀಚಕುಲವಾದ ಬೇಡರ ಜಾತಿಯಲ್ಲಿ ಹುಟ್ಟಿದವಳು. ಪ್ರಾಣಿ ಪಕ್ಷಿಗಳನ್ನು ವಧಿಸುವುದು, ಬೇಟೆಯಾಡುವುದು ಬಿಟ್ಟರೆ ನಮಗೇನೂ ತಿಳಿಯದು. ನನಗೆ ಮುಂದಿನ ದಾರಿಯನ್ನೂ, ಜ್ಞಾನವನ್ನೂ, ಮೋಕ್ಷವನ್ನೂ ನೀನೆ ತೋರಿಸಬೇಕು ಪ್ರಭೂ ಎಂದು ಪ್ರಾರ್ಥಿಸುತ್ತಾಳೆ.

**"ಭಕ್ತಿಮಾರ್ಗವೇ ಮೋಕ್ಷಕೆ ಸೋಪಾನ"** ಎಂದು ಶ್ರೀರಾಮನು ಶಬರಿಗೆ 'ನವಧಾಭಕ್ತಿ' (ನವವಿಧವಾದ ಭಕ್ತಿ)ಯನ್ನು ಅರುಹಿದನು.


1. ಸಜ್ಜನ ಸಾಂಗತ್ಯ.
2. ರಾಮನ ಕಥಾ ಪ್ರಸಂಗದಲ್ಲಿ ಅನುರಕ್ತಿ.
3. ಅಭಿಮಾನವನ್ನು ತೊರೆದು ಗುರುಚರಣಗಳನ್ನು ಸೇವಿಸುವುದು.
4. ದಂಬ (ಜಂಬ) ಕಪಟಗಳನ್ನು ತೊರೆದು ಶ್ರೀರಾಮನ ಗುಣಗಳನ್ನು ಪಾಡುವುದು.
5. ವೇದಗಳಲ್ಲಿ ಪ್ರಸಿದ್ಧವಾದ ರಾಮಮಂತ್ರದ ಜಪ ಹಾಗೂ ರಾಮನಲ್ಲಿ ದೃಢವಾದ ವಿಶ್ವಾಸ.
6. ಇಂದ್ರಿಯ ನಿಗ್ರಹ, ಶೀಲ(ಒಳ್ಳೆಯ ಸ್ವಭಾವ) ಲೌಕಿಕ ಕರ್ಮಗಳಿಂದ ವಿರಕ್ತಿ, ನಿರಂತರ ಸತ್ಪುರುಷರ ಧರ್ಮಾಚರಣೆಗಳಲ್ಲಿ ತೊಡಗಿರುವುದು.
7. ಜಗತ್ತನ್ನು 'ರಾಮಮಯ', 'ಶ್ರೀಹರಿಮಯ'ವೆಂದು ಸಮಾನ ಭಾವದಿಂದ ನೋಡುತ್ತಾ, ಸಜ್ಜನರನ್ನು, ಭಾಗವತೋತ್ತಮರನ್ನು ನನಗಿಂತಲೂ ಹೆಚ್ಚಿನವರು ಎಂದು ತಿಳಿಯುವುದು.
8. ದೊರೆತುದುದರಲ್ಲೇ ತೃಪ್ತನಾಗಿರುವುದರಿಂದ ಮತ್ತು ಸ್ವಪ್ನದಲ್ಲಿಯೂ ಕೂಡ ಇತರರ ದೋಷಗಳನ್ನು ಎಣಿಸದಿರುವುದು.
9. ಎಲ್ಲರೊಡನೆ ಸರಳತೆಯಿಂದ, ನಿಷ್ಕಪಟವಾಗಿ ವರ್ತಿಸುವುದು, ಹೃದಯದಲ್ಲಿ ರಾಮನನ್ನು ಕುರಿತು ಭರವಸೆಯನ್ನಿಟ್ಟುಕೊಂಡು ಯಾವುದೇ ಅವಸ್ಥೆಯಲ್ಲಿ ಹರ್ಷ–ವಿಷಾದಗಳಿಗೆ ತುತ್ತಾಗದಿರುವುದು.

ಈ ಒಂಬತ್ತರಲ್ಲಿ ಯಾವುದಾದರೂ, ಯಾರಿಗಾದರೂ ಸಿದ್ಧಿಸಿದರೆ, ಅವರು ಗಂಡಾಗಲೀ, ಹೆಣ್ಣಾಗಲೀ, ಜಡವಾಗಲೀ, ಚೇತನವಾಗಲೀ, ನನಗೆ ಅತ್ಯಂತ ಪ್ರಿಯನು ಎಂದು ರಾಮನ ಬಾಯಿಂದ ಬಂದ ಮಾತಿದು. ರಾಮನ ವಾಣಿ ಸತ್ಯವಾದುದು.

*(ಕೃಪೆ: ತುಲಸೀರಾಮಾಯಣ)*



■ **ಗಾಯತ್ರಿ ಶೇಷಾಚಲ**



## ಡಾ॥ ರಾಜ್‌ಕುಮಾರ್ ಪ್ರಶಸ್ತಿ

**ಸಂಘದ ಹಿರಿಯ ಸದಸ್ಯ, ಹಿತೈಷಿಗಳಾದ ಶ್ರೀ ಎಸ್. ಶಿವರಾಂರವರು ಚಲನಚಿತ್ರ ರಂಗಕ್ಕೆ ಸಲ್ಲಿಸಿರುವ ಸಮಗ್ರ ಸೇವೆಯನ್ನು ಗುರುತಿಸಿ, ಕರ್ನಾಟಕ ರಾಜ್ಯ ಸರ್ಕಾರ "ಡಾ॥ ರಾಜ್‌ಕುಮಾರ್ ಪ್ರಶಸ್ತಿ" ನೀಡಿ ಗೌರವಿಸಿರುವುದಕ್ಕೆ ಬೃಹಚ್ಚರಣ ಸಂಘ ಸಂತೋಷ ವ್ಯಕ್ತಪಡಿಸಿ, ಶ್ರೀ ಶಿವರಾಂ ಅವರಿಗೆ ಶುಭ ಕೋರುತ್ತದೆ.**



## 'ಬೃಹಚ್ಚರಣ' ಪತ್ರಿಕೆಗೆ ಕೊಡುಗೆ

**ನಮ್ಮ ಸಂಘದ ಪೋಷಕ ಶ್ರೀ ರಘುನಾಥ್‌ರವರು ತಮ್ಮ ತಂದೆ ಶ್ರೀ ಈಶ್ವರ್‌ರವರ ನೆನಪಿನಲ್ಲಿ 'ಬೃಹಚ್ಚರಣ' ಪತ್ರಿಕೆಗೆ 5,000/– ರೂಪಾಯಿಗಳನ್ನು ನೀಡಿರುತ್ತಾರೆ. ಬೃಹಚ್ಚರಣ ಸಂಘವು ಶ್ರೀ ರಘುನಾಥ್ ಹಾಗೂ ಅವರ ಕುಟುಂಬಕ್ಕೆ ಶುಭ ಹಾರೈಸುತ್ತದೆ.**

# ವಾರ್ತಾ ಚಿತ್ರಗಳು



ಶ್ರೀ ಅರುಣ್ ಹಾಗೂ ಶ್ರೀ ಅಶೋಕ್‌ರವರ ಮನೆಯಲ್ಲಿ
ಅಯ್ಯಪ್ಪ ಸ್ವಾಮಿ ಪೂಜೆ ಮತ್ತು ಭಜನೆ : 23–11–2013



ಶ್ರೀ ವಿ.ಎಸ್. ಮಣಿ ಕುಟುಂಬದವರಿಂದ
'ಗಿರಿಜಾ ಕಲ್ಯಾಣೋತ್ಸವ' 24–10–2013



ಶ್ರೀ ಆರ್.ಎಸ್. ವೆಂಕಟಗಿರಿಯಪ್ಪನವರು ತಮ್ಮ ಧರ್ಮಪತ್ನಿ ದಿ॥ ಸುಶೀಲಮ್ಮನವರ ನೆನಪಿಗಾಗಿ "ನಿತ್ಯ ಪ್ರಾರ್ಥನಾ ಶ್ಲೋಕ"ಗಳ ಪುಸ್ತಕವನ್ನು 1–12–2013ರಂದು ಬಿಡುಗಡೆ ಮಾಡಿ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವದಂದು ಭಕ್ತಾದಿಗಳಿಗೆ ಉಚಿತವಾಗಿ ವಿತರಿಸಿದರು.



"ಬೃಹಚ್ಚರಣ" ಸಂಘಕ್ಕೆ ಶ್ರೀ ಎಸ್. ಶ್ರೀಕಂಠೇಶ್ವರ ಪದ್ಮಾವತಿ ದಂಪತಿಗಳು ತಮ್ಮ ಅಜ್ಜಿ–ತಾತ ಶ್ರೀಮತಿ ಲಕ್ಷ್ಮೀದೇವಮ್ಮ, ಸರ್ಜಾಪುರದ ಶ್ರೀರಾಮೇಶ್ವರಯ್ಯ ಹಾಗೂ ಸೋದರಮಾವ ಶ್ರೀ ಎಸ್.ಆರ್.ಲಕ್ಷ್ಮೀನಾರಾಯಣರವರ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿ ನೀಡಿರುತ್ತಾರೆ.



18–10–2013ರಂದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ನಮ್ಮ ಹಿಂದಿನ ಸಂಘದ ಅಧ್ಯಕ್ಷರಾಗಿದ್ದ ದಿ॥ ಎಸ್. ಶ್ರೀಕಂಠೇಶ್ವರ ಅಯ್ಯರ್ ಪದ್ಮಾವತಮ್ಮ ಸ್ಮಾರಕ ಸಮಾರಂಭದಲ್ಲಿ ಶ್ರೀಮತಿ ಇಂದಿರಾ ಪ್ರಕಾಶ್‌ರವರ ಕಲಾ ಪ್ರದರ್ಶನವೇರ್ಪಟ್ಟಿದ್ದು ಎಲ್ಲರ ಗಮನ ಸೆಳೆಯಿತು.



1–12–2013ರಂದು "ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ"ದ ಸಂದರ್ಭದಲ್ಲಿ 2013ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಸಂಘದಿಂದ ಪ್ರತಿಭಾ ಪ್ರಶಸಿಯನ್ನು ನೀಡಿದ ಸಂದರ್ಭದಲ್ಲಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳೊಂದಿಗೆ ಪ್ರಶಸ್ತಿ ವಿಜೇತರು

# ಶಿವ–ಆರತಿ (ಕಾಳಿದಾಸ ಕೃತಿ)

ಭಾರತೀಯ ನೃತ್ಯದಲ್ಲಿ ತಾಂಡವ ಹಾಗೂ ಲಾಸ್ಯಗಳೆಂದು ಎರಡು ಪ್ರಕಾರಗಳು. ಶಿವನು ತನ್ನ ನೃತ್ಯದ ಮುಖ್ಯ ತತ್ತ್ವಗಳನ್ನು ಪ್ರಕಟಿಸುವಂತೆ ತನ್ನ ಗಣಗಳಲ್ಲೊಬ್ಬನಾದ ತಂಡುವಿಗೆ ಆಜ್ಞಾಪಿಸಿದನೆಂದೂ, ಅವನು ಪ್ರಕಟಿಸಿದ ನೃತ್ಯಪ್ರಕಾರವೇ ತಾಂಡವ ನೃತ್ಯವೆಂದೂ ಹೇಳಿಕೆ. ಅದೇ ರೀತಿ ಪಾರ್ವತಿ ದೇವಿ ತನ್ನ ನೃತ್ಯವಿಧಾನವನ್ನು ಶ್ರೀಕೃಷ್ಣನ ಮೊಮ್ಮಗನಾದ ಆನಿರುದ್ಧನ ಹೆಂಡತಿ ಉಷೆಗೆ ಹೇಳಿಕೊಟ್ಟಳೆಂದೂ, ಅದೇ ಲಾಸ್ಯವೆಂದೂ ನಂಬಿಕೆ ಇದೆ. ಗಜಸಂಹಾರ, ವ್ಯಾಘ್ರಸಂಹಾರ, ತ್ರಿಪುರಸಂಹಾರ, ಸಂಧ್ಯಾತಾಂಡವ, ಗೌರೀತಾಂಡವ ಹಾಗೂ ಆನಂದತಾಂಡವ–ಇವು ಪ್ರಮುಖ ತಾಂಡವ ನೃತ್ಯಗಳು. ಆನಂದ ನಟನವು ಬೇರೆಲ್ಲಾ ತಾಂಡವಗಳಿಗಿಂತ ಭಿನ್ನವಾದದ್ದು. ಇದರ ಮೂಲಕ ಶಿವನು ಸೃಷ್ಟಿ, ಸ್ಥಿತಿ, ಲಯ, ತಿರೋಧಾನ, ಅನುಗ್ರಹ ಎಂಬ ಪಂಚಕೃತ್ಯ ವ್ಯಕ್ತಪಡಿಸುತ್ತಾನೆ. ಈ ಪಂಚಕೃತ್ಯದ ಭಾವನೆ ಮೊಟ್ಟಮೊದಲಿಗೆ ಕಾಣಿಸಿಕೊಳ್ಳುವುದು ಪ್ರತ್ಯಭಿಜ್ಞ ದರ್ಶನದಲ್ಲಿ. ಪ್ರತ್ಯಭಿಜ್ಞ ಹೃದಯದ ಮಂಗಲ ಶ್ಲೋಕವೇ ಹೀಗಿದೆ :

**ನಮಶ್ಶಿವಾಯ ಸತತಂ ಪಂಚಕೃತ್ಯಾಭಿದಾಯಿನೇ ।**
**ಚಿದಾನಂದ ಘನಸ್ವಾತ್ಮ ಪರಮಾರ್ಥಾವ ಭಾಸಿನೇ ॥**

**ಪ್ರಸ್ತುತ ಸ್ತೋತ್ರರತ್ನ ಶಿವ–ಆರತಿ ಆನಂದ ತಾಂಡವವನ್ನು ಪ್ರತಿನಿಧಿಸುತ್ತದೆ.**

**ಓಂ ನಮಶ್ಶಿವಾಯ ಓಂ ಹರ ಹರ ಹರ ಮಹದೇವ್ (4)**
**ಓಂ ಜಯಗಂಗಾಧರ ಹರ ಶಿವ ಜಯ ಗಿರಿಜಾಧೀಶ ಶಿವಜಯ ಗೌರೀನಾಥ ।**
**ತ್ವಂ ಮಾಂ ಪಾಲಯ ನಿತ್ಯಂ ಕೃಪಯಾ ಜಗದೀಶ ॥1॥**

**ಕೈಲಾಸೇ ಗಿರಿಶಿಖರೇ ಕಲ್ಪ ದ್ರುಮ ವಿಪಿನೇ ಶಿವ ಕಲ್ಪದ್ರುಮ ವಿಪಿನೇ।**
**ಗುಂಜತಿ ಮಧುಕರ ಪುಂಜೆ ಕುಂಜವನೇ ಗಹನೇ॥**

**ಕೋಕಿಲ ಕೂಜತಿ ಖೇಲತಿ ಹಂಸಾವಲಿಲಲಿತಾ ಶಿವಹಂಸಾವಲಿಲಲಿತ ॥**
**ರಚಯತಿ ಕಲಾಕಲಾಪ್ತಂ ನೃತ್ಯತಿ ಮುದಸಹಿತಾಂ ॥2॥**

**ತಸ್ಮಿನ್ ಲಲಿತ ಸುಧೇಶೇ ಶಾಲಾಮಣಿ ರಚಿತಾ ಶಿವ ಶಾಲಾಮಣಿ ರಚಿತಾ ।**
**ತನ್ಮಧ್ಯೇ ಹರ ನಿಕಟೇ ಗೌರೀ ಮುದಸಹಿತಾಂ ಶಿವ ಗೌರಿ ಮುದಸಹಿತಾಂ ॥**

**ಕ್ರೀಡಾಂರಚಯತಿಭೂಷಾಂ ರಂಜಿತನಿಜಮೀಶಂ ಶಿವರಂಜಿತನಿಜಮೀಶಂ ॥**
**ಇಂದ್ರಾಧಿಪಸುರಸೇವ್ಯಂ ಪ್ರಣಮತಿತೇಶೀರ್ಷಂ ॥3॥**

**ವಿಬುಧವದೂರ್ಬಹು ನೃತ್ಯತಿ ಹೃದಯೇ ಮುದಸಹಿತಾ ಶಿವಹೃದಯೇ ಮುದಸಹಿತಾಂ।**
**ಕಿನ್ನರಗಾಯನ ಕುರುತೇ ಸಪ್ತಸ್ವರ ಸಹಿತಾಂ ॥**

**ಧಿನಥಕ ಥೈ ಥೈ ಧಿನಥಕ ಮೃದಂಗ ವಾದಯತೇ ಶಿವ ಮೃದಂಗ ವಾದಯತೇ॥**
**ಕ್ವಣ ಕ್ವಣ ಲಲಿತಾವೇಣು ರ್ಮಧುರಂ ನಾದಯತೇ ॥4॥**

**ಝಣ ಝಣ ಚರಣೇ ರಚಯತಿ ನೂಪುರಮುಜ್ವಲಿತಂ ಶಿವ ನೂಪುರಮುಜ್ವಲಿತಂ।**
**ಚಕ್ರಾವರ್ತ ಭ್ರಮಯತಿ ಕುರುತೇ ತಾಂ ತಾಂ ತಾಂ**
**ಲುಪಚುತ ತಾಲಂ ನಾದಯತೇ ಶಿವ ತಾಲಂ ನಾದಯತೇ ॥**
**ಅಂಗುಷ್ಟಾಂಗುಲಿ ನಾದಂ ಲಾಸ್ಯ ಕತಾಂ ಕುರುತೇ ॥5॥**

**ಕರ್ಪೂರದ್ಯುತಿ ಗೌರಂ ಪಂಚಾನನ ಸಹಿತಂ ಶಿವ ಪಂಚಾನನ ಸಹಿತಂ ।**
**ತ್ರಿನಯನ ಶಶಿಧರ ಮೌಳಿ ವಿಷಧರ ಕಂಠಯುತಂ ॥**
**ಸುಂದರಜಟಾಕಲಾಪಂ ಪಾವಕಯುತ ಬಾಲಂ ಶಿವ ಪಾವಕ ಶಶಿ ಬಾಲಂ ॥**
**ಢಮರು ತ್ರಿಶೂಲ ಪಿನಾಕಂ ಕರ ಧೃತ ನೃಕಪಾಲಂ ॥6॥**

**ಶಂಖನಿನಾದಂ ಕೃತ್ವಾಝುಲ್ಲರಿ ನಾದಯತೇ ಶಿವಝುಲ್ಲರಿ ನಾದಯತೇ ।**
**ನೀರಾಜಯತೇ ಬ್ರಹ್ಮ ನೀರಾಜಯತೇ ವಿಷ್ಣುರ್ವೇದ ಋಚಾಂ ಪರತೇ ॥**
**ಇತಿಮೃದುಚರಣಸರೋಜಂಹೃದಿಕಮಲೇದೃತ್ವಾಶಿವಹೃದಿಕಮಲೇದೃತ್ವಾ ।**
**ಅವಲೋಕಯತಿಮಹೇಶಂಶಿವಲೋಕಯತಿಸುರೇಶಂಈಶಂಅಭಿನತ್ವ ॥7॥**

**ರುಂಡೈರಚಯತಿ ಮಾಲಾಪನ್ನಗಮುಪವೀತಂ ಶಿವಪನ್ನಗಮುಪವೀತಂ ।**
**ವಾಮಭಾಗೇ ಗಿರಿಜಾರೂಪಂ ಅತಿ ಲಲಿತಂ ॥**
**ಸುಂದರಸಕಲಶರೀರೇ ಮನಸಿಜಕೃತ ಭಸ್ಮಾಭರಣಂ ಶಿವಕೃತ ಇತಿ ಭಸ್ಮಾಭರಣಂ ॥**
**ಇತಿ ವೃಷಭಧ್ವಜರೂಪಂ ಹರಶಿವಶಂಕರರೂಪಂ ತಾಪತ್ರಯಹರಣಂ ॥8॥**

**ಧ್ಯಾನಂ ಆರತಿಸಮಯೇ ಹೃದಯೇ ಇತಿ ಕೃತ್ವಾ ಶಿವಹೃದಯೇ ಇತಿ ಕೃತ್ವಾ ।**
**ರಾಮಂ ತ್ರಿಜಟಾನಾಥಂ ಈಶಂ ಅಭಿನತ್ವಾ ॥**
**ಸಂಗೀತಮೇವಂಪ್ರತಿದಿನ ಪಠಣಂ ಯಃಕುರುತೆ ಶಿವ ಪಠಣಂ ಯಃ ಕುರುತೇ ॥**
**ಶಿವಸಾಯುಜ್ಯಂಗಚ್ಛತಿ ಭಕ್ತ್ಯಾಯಃ ಶ್ರುಣತೇ ॥9॥**

**ಜಯಗಂಗಾಧರ ಹರಹರಜಯಗೌರೀನಾಥ ಶಿವಜಯ ಗಿರಿಜಾಧೀಶ ।**
**ತ್ವಂಮಾಂ ಪಾಲಯ ನಿತ್ಯಂ ತ್ವಮ್ಬಂ ಪಾಲಯ ಶಂಭೋ ಕೃಪಯಾ ಜಗದೀಶ ॥10॥**

*(ಸಂಗ್ರಹ)*

■ ನಡವತ್ತಿ ಗೋಪಾಲಯ್ಯ



## ಅನ್ನಸಂತರ್ಪಣಾ ನಿಧಿ ದಾನಿಗಳು

| | |
|---|---|
| ಶ್ರೀ ಬಿ.ಎಸ್. ಜಯರಾಂ | ರೂ. 2,500/– |
| ಶ್ರೀ ಜಿ. ವೆಂಕಟೇಶ್ | ರೂ. 1,500/– |
| ಶ್ರೀಮತಿ ಸಾವಿತ್ರಮ್ಮ | ರೂ. 4,000/– |
| ಶ್ರೀಮತಿ ಶಕುಂತಲ ರಾಮಕೃಷ್ಣ | ರೂ. 4,000/– |

## "ಬೃಹಚ್ಚರಣ" ಸಂಘದಿಂದ "ಹಿರಿಯಚೇತನ"ಗಳಿಗೆ ಗೌರವ

| | |
|---|---|
| ಶ್ರೀ ಎ.ವಿ. ಶ್ರೀನಿವಾಸ | ಶ್ರೀ ಸುಂದರಮೂರ್ತಿ |
| ಶ್ರೀ ಎನ್.ವಿ. ಗೋಪಾಲಯ್ಯ | ಶ್ರೀಮತಿ ಶಾರದಮ್ಮ |

## 2013ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಸಂಘದಿಂದ ಪ್ರತಿಭಾ ಪ್ರಶಸ್ತಿ.

**ಚಿ॥ ಅಶ್ವಿನಿ ವೆಂಕಟೇಶ್,** ಎಸ್.ಎಸ್.ಎಲ್.ಸಿ.
**ಚಿ॥ ಶಂಕರ ವೆಂಕಟಕೃಷ್ಣ,** ಎಸ್.ಎಸ್.ಎಲ್.ಸಿ.
**ಚಿ॥ ಅಖಿಲ್ ಪ್ರಸಾದ್,** ಎಸ್.ಎಸ್.ಎಲ್.ಸಿ.
**ಚಿ॥ ವಿಶ್ವಾಸ್,** ದ್ವಿತೀಯ ಪಿ.ಯು.ಸಿ.
**ಚಿ॥ ಮೇಘನಾ ಬದರೀನಾರಾಯಣ್,** ದ್ವಿತೀಯ ಪಿ.ಯು.ಸಿ.



# ವಿದ್ಯಾರ್ಥಿ ಲಕ್ಷಣಗಳು

ಒಬ್ಬ ವಿದ್ಯಾರ್ಥಿಯ ಲಕ್ಷಣಗಳೇನು? ಉತ್ತರವಾಗಿ ಹಿರಿಯರು ಈ ಮೂರನ್ನು ಹೇಳಿದ್ದಾರೆ:

**"ಕಾಕದೃಷ್ಟಿ, ಬಕಧ್ಯಾನಂ"**
**ಶ್ವಾನನಿದ್ರಾ ತಥೈವಚ ।**
**ಅಲ್ಪಾಹಾರಿ, ಮಲಿನ ವಸ್ತ್ರಂ**
**ವಿದ್ಯಾರ್ಥಿ ಪಂಚ ಲಕ್ಷಣಂ ॥**

'ಕಾಕದೃಷ್ಟಿ' –ಕಾಗೆಯಂಥ ಸೂಕ್ಷ್ಮವಾದ ದೃಷ್ಟಿ. ನೆಲದಲ್ಲಿ ಚಿಕ್ಕ ತಿಂಡಿಯ ಚೂರಿದ್ದರೂ ಅದನ್ನು ಪತ್ತೆ ಹಚ್ಚಿ ತಿನ್ನುವ ಸಾಮರ್ಥ್ಯ, ಸೂಕ್ಷ್ಮತೆ ಕಾಗೆಗಿದೆ. ಅಂಥ ಸೂಕ್ಷ್ಮತೆಯನ್ನು ವಿದ್ಯಾರ್ಥಿಯಾದವನು ಮೈಗೂಡಿಸಿಕೊಳ್ಳಬೇಕು.

'ಬಕಧ್ಯಾನ'– ಅಂದರೆ ಕೊಕ್ಕರೆಯಂಥ ಏಕಗ್ರತೆಯೇ ಧ್ಯಾನ. ಕೊಕ್ಕರೆ ನೀರಿನಲ್ಲಿ ಒಂದೇ ಕಾಲಿನಲ್ಲಿ ಅಚಲವಾಗಿ ನಿಂತು, ಏಕಾಗ್ರತೆಯಿಂದ ನೀರನ್ನು ನೋಡುತ್ತಿರುತ್ತದೆ. ಎಷ್ಟೇ ಚಿಕ್ಕ ಮೀನು ಬಂದರೂ, ಅದರ ಏಕಾಗ್ರತೆಯ ದೃಷ್ಟಿಗೆ, ಅದು ಕಂಡೇಕಾಣುತ್ತದೆ. ಇಂಥ ಏಕಾಗ್ರತೆಯನ್ನು ವಿದ್ಯಾರ್ಥಿಯಾದವನು ವಿದ್ಯಾಭ್ಯಾಸದಲ್ಲಿ ತೋರಿಸಬೇಕು.

'ಶ್ವಾನನಿದ್ರಾ' ಎಂದರೆ ನಾಯಿಗಿರುವಂಥ ಜಾಗೃತ ಮನಸ್ಸಿನ ನಿದ್ದೆ. ಎಷ್ಟೇ ಸಣ್ಣ ಸಪ್ಪಳವೂ ನಾಯಿಯನ್ನು ಎಚ್ಚರಗೊಳಿಸುತ್ತದೆ. ವಿದ್ಯಾರ್ಥಿಯಾದವನು ಎಂಥ ಜಾಗೃತ ಮನಸ್ಸಿನ ನಿದ್ರೆಯನ್ನು ಮಾಡಬೇಕು ಆದರೆ ಕುಂಭಕರ್ಣನಂಥ ಗಾಢನಿದ್ರೆಯನ್ನಲ್ಲ.

'ಅಲ್ಪಾಹಾರಿ' ಅಂದರೆ ಮಿತವಾದ ಆಹಾರ. ವಿದ್ಯಾರ್ಥಿ ಯಾದವನು ಹೊಟ್ಟೆಗೂ, ಮನಸ್ಸಿಗೂ ಹಿತವಾಗುವಂಥ ಸಾತ್ವಿಕ ಆಹಾರವನ್ನು ಸೇವಿಸಬೇಕು.

'ಮಲಿನವಸ್ತ್ರಂ' ಅಂದರೆ ಕೊಳಕು ಬಟ್ಟೆಯನ್ನು ಧರಿಸಬೇಕೆಂದಲ್ಲ. ವಿದ್ಯಾರ್ಥಿಯು ತನ್ನ ಬಟ್ಟೆ ಬರೆಗಳಿಗೆ, ಶೃಂಗಾರಕ್ಕೆ ಪ್ರಾಶಸ್ತ್ಯ ಕೊಡಬಾರದೆಂದು ಹಿರಿಯರ ಸಲಹೆ. ಈ ಐದು ನಿಮಯಗಳನ್ನು ಪಾಲಿಸುವ ವಿದ್ಯಾರ್ಥಿಯು ಸಫಲತೆಯ ದಾರಿಯಲ್ಲಿ ನಡೆಯುತ್ತಾನೆಂದು ಹಿರಿಯರು ಹೇಳಿದ್ದಾರೆ.

"ಆಲಸ್ಯಂಹಿ ಮನುಷ್ಯಾಣಾಂ ಶರೀರಸ್ಥೋ ಮಹಾನ್ ರಿಪುಃ" ಎಂಬ ಒಂದು ಮಾತಿದೆ. ಆಲಸ್ಯ ಎಂಬುದು ಮನುಷ್ಯನ ಶರೀರದಲ್ಲಿರುವ ದೊಡ್ಡ ಶತ್ರು. ಅದನ್ನು ವಿದ್ಯಾರ್ಥಿಜೀವನದಲ್ಲಿ ಚಿವುಟಿ ಹಾಕಬೇಕು.

'ವಿದ್ಯಾದದಾತಿವಿನಯಂ' ಎಂಬಂತೆ ವಿದ್ಯಾರ್ಥಿ ದೆಸೆಯಿಂದಲೇ ವಿನಯವನ್ನು ಮೈಗೂಡಿಸಿಕೊಳ್ಳಬೇಕು. ಮೇಲಿನ ಎಲ್ಲಾ ಲಕ್ಷಣಗಳನ್ನು ಆಳವಡಿಸಿಕೊಂಡು 'ಇಂದಿನ ಮಕ್ಕಳೇ ನಾಳಿನ ಪ್ರಜೆಗಳು' ಎಂಬಂತೆ ಉತ್ತಮ ಪ್ರಜೆಗಳಾಗಿ, ದೇಶವನ್ನು ಪ್ರಗತಿಪಥದಲ್ಲಿ ಕೊಂಡುಯ್ಯುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

## ವಿದ್ಯಾರ್ಥಿಗಳಿಗೆ ಬುದ್ಧಿ ಮಾತು

ಪಂಚೇಂದ್ರಿಯಗಳು ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ ಹೊರಗಡೆ ಕೆಲಸ ಮಾಡುವ ಅಂಗಗಳು. ಆದರೆ 'ಅಂತಃಕರಣ' ದೇಹದ ಒಳಗಡೆ ಕೆಲಸ ಮಾಡುತ್ತದೆ. ಮನಸ್ಸು, ಬುದ್ಧಿ, ಚಿತ್ತ ಮತ್ತು ನಾನು ಅಂತಃಕರಣದ ನಾಲ್ಕು ಭಾಗಗಳು ಮನಸ್ಸು, ಬುದ್ಧಿ ಮತ್ತು ಚಿತ್ತಗಳನ್ನು ಬೆಳಸಬೇಕು. ಅಂದರೆ ಯೋಚನೆ, ನಿಶ್ಚಯ ಮತ್ತು ಜ್ಞಾಪಕಗಳನ್ನು ಹೆಚ್ಚಿಸಿಕೊಳ್ಳಬೇಕು. ನಾನು ಎಂಬ ಅಹಂಕಾರವನ್ನು ಕಡಿಮೆ ಮಾಡಬೇಕು. ಸಂಬಂಧಿಸಿದ್ದರ ಬಗ್ಗೆ ಕ್ರಮವಾಗಿ ಯೋಚಿಸಬೇಕು. ಏಕಾಗ್ರತೆ ಎಂದರೆ ಏಕ+ಅಗ್ರ ಎಂದು. ಏಕಾಗ್ರತೆಯನ್ನು ಬೆಳೆಸಿಕೊಳ್ಳುವುದು ಹೇಗೆ?

1. ಕಲಿಯುವ ವಿಷಯದ ಬಗ್ಗೆ ಪ್ರೀತಿ–ಪ್ರೇಮ ಇರಬೇಕು ಮತ್ತು ತಿಳಿಯುವ ಆಸೆ ಇರಬೇಕು.
2. ಅರ್ಥಮಾಡಿ, ನಿಶ್ಚಯಮಾಡಿ–ಉಪಾಧ್ಯಾಯರನ್ನು ಕೇಳಿ ತಿಳಿಯಬೇಕು.
3. ಪುನರಾವರ್ತನೆ ಮಾಡಿ ಜ್ಞಾಪಕವನ್ನು ಹೆಚ್ಚಿಸಿಕೊಳ್ಳುವುದು.
4. ದೇಹದ ಬಗ್ಗೆ ಕಾಳಜಿ ವಹಿಸುವುದು. ಪ್ರತಿ ನಿತ್ಯ ವ್ಯಾಯಾಮ ಅಗತ್ಯ.
5. ಮೇಧಾವಿಯಾಗಬೇಕು ಮತ್ತು ಸೇವಾಮನೋಭಾವನೆಯನ್ನು ಬೆಳಸಿಕೊಳ್ಳಬೇಕು.
6. ತಾಯಿ–ತಂದೆಯರನ್ನು ದೇವರೆಂದು ಸೇವೆ ಮಾಡಬೇಕು. ತಾಯಿ ಅತ್ಯಂತ ಶ್ರೇಷ್ಠ.
7. ಆಹಾರ ಶುದ್ಧವಾಗಿರಬೇಕು. ಮನೆಯಲ್ಲಿ ಮಾಡಿದ್ದು ತಿನ್ನಬೇಕು. ಅನ್ನವನ್ನು ಭಕ್ತಿಯಿಂದ ತಿನ್ನಬೇಕು. ಬಿಸಾಡಬಾರದು.... ದಂಡ ಮಾಡಬಾರದು.
8. ಭಗವಂತನ ಪ್ರಾರ್ಥನೆಯನ್ನು ಬೆಳಗ್ಗೆ ಮತ್ತು ಸಂಜೆ ಕನಿಷ್ಠ 5 ನಿಮಿಷವಾದರೂ ಮಾಡಬೇಕು.
9. ಸೂರ್ಯನ ಸ್ತೋತ್ರ ಬುದ್ಧಿ ಬೆಳವಣಿಗೆಗೆ ಸಹಾಯಕ. ಅದನ್ನು ನಿತ್ಯ ಪಠಿಸಬೇಕು.

**"ಧ್ಯೇಯಸ್ಸದಾ ಸವಿತೃಮಂಡಲ; ಮಧ್ಯವರ್ತಿ**
**ನಾರಾಯಣಃ । ಸರಸಿಜಾಸನ ಸನ್ನಿರಿಷ್ಠಹ**
**ಕೇಯೂರವಾನ್, ಮಕರ ಕುಂಡಲವಾನ್ ಕಿರೀಟ**
**ಭಾರಿ ಹಿರಣ್ಮಯಿನಹುಂ ಕೃತ ಶಂಖಚಕ್ರಃ**



■ ಎಸ್. ಶ್ರೀನಿವಾಸಯ್ಯ

# ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ



'ಬೃಹಚ್ಚರಣ' ಸಂಘವು 1–12–13 ಭಾನುವಾರದಂದು ಸಾಮೂಹಿಕ ಶ್ರೀ ಶ್ರೀನಿವಾಸ ಕಲ್ಯಾಣ ಮಹೋತ್ಸವವನ್ನು ನಾಗಕ್ಷೇತ್ರ ಕಿತ್ತಗಾನಹಳ್ಳಿಯಲ್ಲಿ ಯಶಸ್ವಿಯಾಗಿ ನೆರವೇರಿಸಿತು. ನಮ್ಮ ಕುಲಬಾಂಧವರೆಲ್ಲ ಒಟ್ಟುಗೂಡಿ ಆಚರಿಸಿದ ಉತ್ಸವ ನಮ್ಮ ಮನೆಯ ಮದುವೆಯ ಸಮಾರಂಭದಂತಿದ್ದದ್ದು ಎಲ್ಲರಿಗೂ ಸಂತೋಷ ತಂದಿತು.

ಬೆಳಗ್ಗೆ 9.30ರ ಸುಮುಹೂರ್ತದಲ್ಲಿ ಭೂದೇವಿ, ನೀಳಾದೇವಿ ಸಮೇತ ಶ್ರೀ ಶ್ರೀನಿವಾಸದೇವರ ಉತ್ಸವ ಮೂರ್ತಿಗಳನ್ನು ಮಂಗಳವಾದ್ಯದೊಂದಿಗೆ ನಮ್ಮ ಸೇವಾಕರ್ತರೇ ಮೆರವಣಿಗೆಯಲ್ಲಿ ಭಕ್ತಿಪೂರ್ವಕವಾಗಿ, ಧಾರ್ಮಿಕ ವಿಧಿ ವಿಧಾನ, ಮಂತ್ರಘೋಷದೊಂದಿಗೆ ತಂದರು.

ಸಂಘದ ಅಧ್ಯಕ್ಷ ಶ್ರೀ ಸಂಣೆ ಸೋಮಸುಂದರ್‌ರವರು ಹಾಗು ಕಾರ್ಯದರ್ಶಿ ಶ್ರೀ ವಿ.ಎಸ್.ಮಣಿಯವರ ಸ್ವಾಗತದೊಂದಿಗೆ ದಾರ್ಶನಿಕ ವೇದಬ್ರಹ್ಮ ಶ್ರೀ ನಂಜುಂಡ ದೀಕ್ಷಿತರ ಮಾರ್ಗದರ್ಶನದಲ್ಲಿ 45 ದಂಪತಿಗಳು ಶ್ರೀ ಶ್ರೀನಿವಾಸನ ಮದುವೆ ಸಮಾರಂಭದಲ್ಲಿ ಪಾಲ್ಗೊಂಡಿದ್ದು, ಇದನ್ನು ವೀಕ್ಷಿಸುವುದೇ ಒಂದು ಸಂಭ್ರಮವಾಗಿತ್ತು. ಗಣಪತಿ ಪೂಜೆಯ ನಂತರ ಕಲ್ಯಾಣೋತ್ಸವದಲ್ಲಿ ಭಾಗವಹಿಸಿದ್ದ ಪ್ರತಿ ಸೇವಾಕರ್ತ ದಂಪತಿಗಳಿಗೂ ಶಲ್ಯ, ರವಿಕೆ ಕಣ, ಪೂಜಾದ್ರವ್ಯ ಹಾಗೂ ಪೋಷಕ ಶ್ರೀ ವೆಂಕಟಗಿರಿಯಪ್ಪ ಕುಟುಂಬದವರು ನೀಡಿದ ಶ್ರೀ ಶ್ರೀನಿವಾಸದೇವರ ನಾಣ್ಯ ನೀಡಲಾಯಿತು. ಪ್ರತಿ ದಂಪತಿಗಳೂ ಕನ್ಯಾದಾನ ಮಾಡಿ ಕೃತಾರ್ಥರಾದರು. ಮಂತ್ರ ಪುಷ್ಪದ ಸಮಯದಲ್ಲಿ ನಾದಸ್ವರದ ತಂಡದವರಿಂದ ನುಡಿಸಲ್ಪಟ್ಟ ವಿವಿಧ ರಾಗಗಳ ಸೇವೆ ಜನ ಮೆಚ್ಚುಗೆ ಪಡೆಯಿತು.

ಇದೇ ಸಂದರ್ಭದಲ್ಲಿ ದೇವತಾ ಉತ್ಸವ ಮೂರ್ತಿಗೆ ಉತ್ಸವಗಳಲ್ಲಿ ಬಳಸುವಂತಹ ಎರಡು ಬೃಹತ್ ಛತ್ರಿಗಳನ್ನು ಅರ್ಪಿಸಲಾಯಿತು. ಪುಷ್ಪಾಲಂಕೃತ ಸ್ವಾಮಿಯು ಬಹು ವಿಜೃಂಭಣೆಯಿಂದ ಮೆರೆಯುತ್ತಿರುವಂತಿತ್ತು. ಶ್ರೀ ಶ್ರೀನಿವಾಸನಿಗೆ ಮದುವೆಯ ಸಮಯದಲ್ಲಿ ಸೇವಾಕರ್ತರು ಉಡುಗೊರೆಗಳನ್ನು ಅರ್ಪಿಸಿದಂತೆಯೇ, ಸುಮಾರು 13 ಸಾವಿರ ರೂಪಾಯಿಗಳಿಗೂ ಹೆಚ್ಚು ಕಾಣಿಕೆಗಳನ್ನು ನೀಡಿದರು. ದೇವಸ್ಥಾನದ ಮಂಡಳಿಯು ಈ ಕಾಣಿಕೆಯನ್ನು ಕೃತಜ್ಞತೆಯಿಂದ ಸ್ವೀಕರಿಸಿ, ಸಮಾರಂಭದ ನೆನಪಿಗಾಗಿ ಶ್ರೀ ಶ್ರೀನಿವಾಸ ದೇವರಿಗೆ ಬೆಳ್ಳಿಕಿರೀಟಕ್ಕೆ ಉಪಯೋಗಿಸಿಕೊಳ್ಳುವ ನಿರ್ಧಾರವನ್ನು ತಿಳಿಸುತ್ತಿದ್ದಂತೆಯೇ ಸಂಘದ ಅಧ್ಯಕ್ಷರು, ಸಂಘದ ಪರವಾಗಿ 5000/– ರೂ.ಗಳನ್ನು ನೀಡಿದರು. ಇದೇ ಸಂದರ್ಭದಲ್ಲಿ ಸಂಘದ ಪೋಷಕ ಶ್ರೀ ಶ್ರೀನಿವಾಸಯ್ಯನವರು, ಅವರ ಅತ್ತೆಯ ಹೆಸರಿನಲ್ಲಿ 10,000/– ರೂ.ಗಳನ್ನು ಶ್ರೀ ಬಿ.ಸಿ. ಸತ್ಯನಾರಾಯಣರವರು ಅವರ ತಂದೆ ಶ್ರೀ ಬಿ. ಚಂದ್ರಶೇಖರಯ್ಯ ಅವರ ಜನ್ಮ ಶತಾಬ್ಧಿಯ ನೆನಪಿನಲ್ಲಿ 5000/–ರೂ.ಗಳನ್ನು ನೀಡುವ ವಾಗ್ದಾನ ಮಾಡಿದರು.

ಶ್ರೀ ಶ್ರೀನಿವಾಸನ ಕಿರೀಟಕ್ಕೆ ಸುಮಾರು 750 ಗ್ರಾಂ ತೂಕದ ಬೆಳ್ಳಿ ಬೇಕಾಗಬಹುದೆಂದು ಅಂದಾಜಿಸಲಾಗಿದ್ದು, ಉಳಿದ ವೆಚ್ಚವನ್ನು ಸಂಘದ ಪೋಷಕರಾದ ಶ್ರೀ ವೆಂಕಟಗಿರಿಯಪ್ಪ ಮತ್ತು ಅವರ ಮಕ್ಕಳು ಭರಿಸುವುದಾಗಿ ತಿಳಿಸಿದರು.

ಸಂಘಕ್ಕೆ 250/–ರೂ.ಗಳಿಗಿಂತ ಹೆಚ್ಚಿಗೆ ದೇಣಿಗೆ ನೀಡಿದ ಎಲ್ಲರಿಗೂ ಪೋಷಕ ಶ್ರೀ ವಿ.ಎಸ್. ಮಣಿಯವರು ಶ್ರೀನಿವಾಸ ದೇವರ ನಾಣ್ಯವನ್ನು ಉಚಿತವಾಗಿ ನೀಡಿದರು.

ಕಲ್ಯಾಣೋತ್ಸವದ ಪ್ರಸಾದ ರೂಪವಾಗಿ ಪುಷ್ಕಳ ಭೋಜನವನ್ನು ಏರ್ಪಡಿಸಲಾಗಿತ್ತು. ಶ್ರೀ ಬಿ.ಸಿ. ಸತ್ಯನಾರಾಯಣ್ ಹಾಗೂ ಶ್ರೀ ರಮೇಶ್‌ರವರು ಅವರ ತಂದೆಯ ನೂರನೇ ಹುಟ್ಟುಹಬ್ಬದ ಸವಿನೆನಪಿಗಾಗಿ ಲಾಡು ಭಕ್ಷ್ಯವನ್ನು ವಿತರಿಸಿದರು. ಸುಮಾರು 600 ಮಂದಿಗೆ ಬೆಳಗಿನ ಉಪಹಾರ, ಮಧ್ಯಾಹ್ನ ಭೋಜನ ಹಾಗೂ ಸಂಜೆ ಕಾಫಿಯನ್ನು ನೀಡಲಾಯಿತು. ಅಂತೆಯೇ ಸಂಘದ ಪೋಷಕ ಶ್ರೀ ಎಸ್.ಸಿ. ಶ್ರೀನಿವಾಸ್‌ರವರು ಹಾಗೂ ಶ್ರೀ ಎಸ್.ಆರ್. ಉಮಾಕುಮಾರ್‌ರವರು ತಿರುಪತಿಯಿಂದ ತರಿಸಲಾದ ಲಾಡು ಪ್ರಸಾದವನ್ನು ವಿತರಿಸಿದರು.

ಸಂಘವು ಹಿರಿಯ ಚೇತನಗಳಿಗೆ ಗೌರವಿಸುವ ಸಮಾರಂಭ ಕಾರ್ಯಕ್ರಮದಲ್ಲಿ ಶ್ರೀ ಎ.ವಿ. ಶ್ರೀನಿವಾಸ್‌ರವರನ್ನು ಗೌರವಿಸುವುದರೊಂದಿಗೆ ಪ್ರತಿಭಾ ವಿದ್ಯಾರ್ಥಿಗಳಾದ ಕು॥ ಮೇಘನಾ ಬಿ. ನಾರಾಯಣ್, ಕು॥ ಅಶ್ವಿನಿ ವೆಂಕಟೇಶ್, ಶಂಕರ್ ವೆಂಕಟಕೃಷ್ಣ, ಅಖಿಲ್ ಶಾಂಪ್ರಸಾದ್, ವಿಶ್ವಾಸ್ ಭಾನುಮೂರ್ತಿ ಇವರುಗಳನ್ನು ಪುರಸ್ಕರಿಸಲಾಯಿತು. ಶ್ರೀ ಟಿ.ಎಸ್.ರಮೇಶ್ ಅವರು ಕಾರ್ಯಕ್ರಮದ ನಿರೂಪಣೆಯನ್ನು, ಸಂಘದ ಲೆಕ್ಕ ಪರಿಶೋಧಕ ಶ್ರೀ ಶಶಿಧರ್‌ರವರು ವಂದನಾರ್ಪಣೆಯನ್ನು ಸಲ್ಲಿಸಿದರು.



■ ಲಲಿತ ರಮೇಶ್

## ಶ್ರೀ ಶ್ರೀನಿವಾಸ ಕಲ್ಯಾಣೋತ್ಸವನಿರತ ದಂಪತಿಗಳು



ಶ್ರೀಮತಿ ಗೀತಾಲಕ್ಷ್ಮೀ – ಶ್ರೀ ಕೆ.ಎಸ್. ಛಾಯಾಪತಿ



ಶ್ರೀಮತಿ ಗೀತಾ – ಶ್ರೀ ಎಸ್. ನಾಗರಾಜ್



ಶ್ರೀಮತಿ ಪ್ರದ್ಮಿನಿ – ಕರ್ನಲ್ ವಿ.ಜಿ. ರಾಜನ್



ಶ್ರೀ ಪ್ರಭಾಕರ್ ರಾವ್ – ಶ್ರೀಮತಿ ಅನಸೂಯ



ಶ್ರೀಮತಿ ವಸುಂಧರ – ಶ್ರೀ ಹೆಚ್.ಡಿ. ಗಣೇಶ್



ಶ್ರೀಮತಿ ನಾಗರತ್ನ – ಶ್ರೀ ಟಿ.ಎಸ್. ರಮೇಶನ್



ಶ್ರೀಮತಿ ಗಿರಿಜಾ – ಶ್ರೀ ವೆಂಕಟೇಶ್‌ಮೂರ್ತಿ



ಶ್ರೀಮತಿ ಮೇಘ – ಶ್ರೀ ಸುಮಂತ್

## ಶ್ರೀ ಶ್ರೀನಿವಾಸ ಕಲ್ಯಾಣೋತ್ಸವನಿರತ ದಂಪತಿಗಳು



ಶ್ರೀಮತಿ ನಿರ್ಮಲ – ಶ್ರೀ ಎಸ್. ಶ್ರೀನಿವಾಸಯ್ಯ



ಶ್ರೀ ಅಶೋಕ್‌ಕುಮಾರ್ – ಶ್ರೀಮತಿ ಪುಷ್ಪ



ಶ್ರೀಮತಿ ಮೀರಾ – ಶ್ರೀ ಇಂದುಮೌಳಿ



ಶ್ರೀಮತಿ ಉಮಾದೇವಿ – ಶ್ರೀ ಕೆ.ಬಿ. ದಾಸ್



ಶ್ರೀಮತಿ ನಾಗರತ್ನ – ಶ್ರೀ ಎ.ಆರ್. ರವೀಂದ್ರಶರ್ಮ



ಶ್ರೀಮತಿ ವಸುಧ – ಡಾಕ್ಟರ್ ಜಿ. ಸ್ವಾಮಿನಾಥನ್



ಶ್ರೀಮತಿ ವಾಗ್ದೇವಿ – ಶ್ರೀ ಹೆಚ್.ಆರ್. ಬದರೀನಾರಾಯಣ್



ಶ್ರೀಮತಿ ಚಿತ್ರಾ – ಶ್ರೀ ಜಿ.ಎನ್. ಪ್ರಸಾದ್

## ಶ್ರೀ ಶ್ರೀನಿವಾಸ ಕಲ್ಯಾಣೋತ್ಸವನಿರತ ದಂಪತಿಗಳು



ಶ್ರೀಮತಿ ಜಲಜಾ ಪ್ರಕಾಶ್ – ಶ್ರೀ ಎನ್.ವಿ. ಪ್ರಕಾಶ್



ಶ್ರೀಮತಿ ಗಾಯತ್ರಿ – ಶ್ರೀ ಬಿ.ಎನ್. ಶೇಷಾಚಲ



ಶ್ರೀಮತಿ ಶೈಲ – ಶ್ರೀ ಎಸ್. ಶ್ರೀನಿವಾಸನ್



ಶ್ರೀಮತಿ ವೀಣಾ – ಶ್ರೀ ಸಿ. ವೆಂಕಟೇಶ್



ಶ್ರೀಮತಿ ರತ್ನ – ಶ್ರೀ ಸತ್ಯಮೂರ್ತಿ ಜಿ.ಎಸ್.



ಶ್ರೀಮತಿ ಗೌರಾಂಬ – ಶ್ರೀ ಕೆ. ವೆಂಕಟಸುಬ್ಬಯ್ಯ



ಶ್ರೀಮತಿ ಮಂಜುಳ – ಶ್ರೀ ಟಿ.ಆರ್. ನಾಗಭೂಷಣ



ಶ್ರೀಮತಿ ಮಂಜುಳ – ಶ್ರೀ ಎಸ್.ಸಿ. ಶ್ರೀನಿವಾಸ್

## ಶ್ರೀ ಶ್ರೀನಿವಾಸ ಕಲ್ಯಾಣೋತ್ಸವನಿರತ ದಂಪತಿಗಳು


ಶ್ರೀಮತಿ ನಾಗರತ್ನ – ಶ್ರೀ ಆರ್. ವೆಂಕಟೇಶ್ ಪ್ರಸಾದ್


ಶ್ರೀಮತಿ ಸವಿತಾ – ಶ್ರೀ ಈಶ್ವರನ್


ಶ್ರೀಮತಿ ಗಂಗಾ ಕಿರಣ್ – ಶ್ರೀ ಹೆಚ್.ಕೆ. ರವಿಕಿರಣ್


ಶ್ರೀಮತಿ ಪದ್ಮಾವತಿ – ಶ್ರೀ ಕೆ.ಎಸ್. ಸತ್ಯನಾರಾಯಣ


ಶ್ರೀಮತಿ ಮಾನಸ – ಶ್ರೀ ಎಸ್. ಅರವಿಂದ


ಶ್ರೀಮತಿ ವೀಣಾ – ಶ್ರೀ ಶ್ರೀನಿವಾಸ್


ಶ್ರೀಮತಿ ಲಕ್ಷ್ಮೀ ಸತೀಶ್ – ಶ್ರೀ ವಿ. ಸತೀಶ್


ಶ್ರೀಮತಿ ಇಂದಿರಾಣಿ – ಶ್ರೀ ಮಂಜುನಾಥ್

# ಶ್ರೀ ಶ್ರೀನಿವಾಸ ಕಲ್ಯಾಣೋತ್ಸವನಿರತ ದಂಪತಿಗಳು



ಶ್ರೀಮತಿ ಜಯಂತಿ – ಶ್ರೀ ಬಿ.ಸಿ. ಸತ್ಯನಾರಾಯಣ



ಶ್ರೀಮತಿ ರಮಾದೇವಿ – ಶ್ರೀ ಸಿ.ಎನ್. ಗುರುಪ್ರಸಾದ್



ಶ್ರೀಮತಿ ಲಕ್ಷ್ಮೀಶ್ರೀ – ಶ್ರೀ ಅಜಯ್ ರಾಜಾಪುರ್



ಶ್ರೀಮತಿ ರೇಖಾ ರಮೇಶ್ – ಶ್ರೀ ಆರ್.ಎಸ್. ರಮೇಶ್



ಶ್ರೀಮತಿ ಜಯಂತಿ – ಶ್ರೀ ಬಿ.ಎಸ್. ರಂಗನಾಥ ಪ್ರಸಾದ್



ಶ್ರೀಮತಿ ಮಮತಾ – ಶ್ರೀ ಶಿವಕುಮಾರ್



ಶ್ರೀಮತಿ ಸುಮ – ಶ್ರೀ ವಿ. ಅರುಣ್



ಶ್ರೀಮತಿ ಅರುಣ ಪ್ರಸಾದ್ – ಶ್ರೀ ರಾಮೇಶ್ವರ್ ಪ್ರಸಾದ್

ಛಾಯಾಚಿತ್ರ: ನಟರಾಜ್ ಜೆ.ಕೆ ಮತ್ತು ಶಿವಕುಮಾರ್ ಎಸ್.



ಕಲ್ಯಾಣೋತ್ಸವನಿರತ ಶ್ರೀಮತಿ ರತ್ನ – ಪ್ರೊ. ಕೆ.ಎಸ್. ಮಧುಸೂದನ



ದಾನಿಗಳಾದ ಶ್ರೀ ಎಸ್.ಶ್ರೀಕಂಠೇಶ್ವರ ದಂಪತಿಗಳಿಗೆ ಸಂಘದ ಕೃತಜ್ಞತೆಗಳು

## ಶ್ರೀ ಶ್ರೀನಿವಾಸ ಕಲ್ಯಾಣೋತ್ಸವದಂದು ಧನ ಸಹಾಯ ನೀಡಿದವರು

**ಶ್ರೀಮತಿ/ಶ್ರೀ**

ಎ.ಎಂ. ಸಂತೋಷ
ಕೃಷ್ಣಮೂರ್ತಿ
ಬಿ.ಸಿ. ಸತ್ಯನಾರಾಯಣ
ಜಿ. ಉಮೇಶ್
ಬಿ.ಎ. ಶ್ರೀನಿವಾಸ
ಇ. ರಘುನಾಥ್
ಶುಭಾ ಗಾಯತ್ರಿ
ಉದಯ–ರಾಜೇಶ್ವರಿ
ಅಜಯ – ಲಕ್ಷ್ಮೀ
ವಿಕ್ರಂ ಕಾವ್ಯ ಮಲ್ಲೂರು
ಭಾಗ್ಯ
ಜಿ.ವಿ. ಸುಬ್ಬಣ್ಣ ರುಕ್ಮಿಣಿ
ಉಮೇಶ್–ಮಂಜುನಾಥ್ಎ.ವಿ.
ನಾಗರಾಜ್ ಅಯ್ಯರ್
ಶ್ರೀಮತಿ
ಬಿ.ಇ. ಸುರೇಶ್
ಟಿ.ಎಲ್. ಚಂದ್ರು
ವಿನಯ್ ಆರ್.
ಎ.ಎಂ. ಸುಬ್ರಮಣ್ಯಂ
ಹೆಚ್.ಕೆ. ರಾಮಸ್ವಾಮಿ
ಸಂಜಯ–ರೂಪ
ಭಾಗ್ಯ ಕುಮಾರ್
ನವ್ಯ ಹರ್ಷ
ಗೀತಾ ಶೇಖರ್
ರಾಘವೇಂದ್ರ ಮಾಸ್ತಿ
ರಾಘವ ಪ್ರಸಾದ್ ಎಸ್.ಸಿ.
ಡಾ. ತಿಲಕ್ ಆರ್.ಎಂ.
ಎಸ್. ಗೋವಿಂದರಾಜನ್
ಲಲಿತಮ್ಮ
ತ್ಯಾಗರಾಜ್
ಅಶ್ವಿನಿ
ಜಯರಾಂ
ಜೆ. ರವಿಕುಮಾರ್
ಕೆ. ಸುಬ್ರಮಣ್ಯ
ಸುದರ್ಶನ್ ರಾಂ
ರೇಣು ಜಯಕುಮಾರ್
ಕೆ.ವಿ. ರಾಮಚಂದ್ರ
ರಾಧಾಕೃಷ್ಣನ್
ಕೆ.ಜಿ. ನಾಗರಾಜ್
ಅಂಬಾ
ಕೆ. ಗುಂಡಪ್ಪ
ಗಣೇಶ್ ಶ್ರೀಧರ್
ಪದ್ಮಾವತಿ ಸೂರಪ್ಪ
ಕೆ. ಮಂಜುನಾಥ್
ಬಿ.ಸಿ. ರಮೇಶ್‌ಬಾಬು
ಟಿ.ಪಿ. ಸೂರ್ಯನಾರಾಯಣ
ಛಾಯಾಪತಿ
ಬಿ.ಎನ್. ಗೋವಿಂದಪ್ರಸಾದ್
ಕೆ. ಶಿವರಾಂ
ಟಿ.ಪಿ. ಜಗನ್ನಾಥ್
ಎನ್.ಎಲ್. ಸುಬ್ರಮಣ್ಯ
ಚಂಪಕ್ ಟಿ.ಎಸ್.
ಎಂ. ಶ್ರೀನಿವಾಸ
ಮಂಗಳಾ ಅರುಣ್
ವರುಣ್
ವಿ.ಎಸ್. ರಾಮಚಂದ್ರ
ಮಂಜುನಾಥ್
ರಾವ್ ಇಂಡಸ್ಟ್ರೀಸ್
ಸರಸ್ವತಿ
ಜಿ. ಉಮೇಶಕುಮಾರ್
ಜಿ.ಎಸ್. ವೆಂಕಟೇಶ್
ಟಿ.ಜೆ. ರಘುರಾಜ್
ಜೈಶ್ರೀ ವೆಂಕಟೇಶ್
ಆರ್.ಎಸ್. ಅಶ್ವತ್ಥನಾರಾಯಣ

## ಚುಟುಕುಗಳು

### ಇಂದಿನ ವಿದ್ಯಾರ್ಥಿ

ಅಂದು ಹಾಡಿದರು
ಗುರುವಿನ
ಗುಲಾಮನಾಗುವ ತನಕ
ದೊರೆಯದಣ್ಣ ಮುಕುತಿ

ಇಂದಿನ ವಿದ್ಯಾರ್ಥಿ
ಹೇಳುತ್ತಾನೆ
ಗುರುವನು ಗುಲಾಮನಾಗಿಸೊ ತನಕ
ಮೆರೆಯದಣ್ಣ ಶಕುತಿ

### ನಾರಿ

ಒಲಿದರೆ ನಾರಿ
ಮುನಿದರೆ ಮಾರಿ
ಎರಡೂ ಅಲ್ಲದಿದ್ದರೆ
ಗಂಡನಿಗೆ ಖರ್ಚಿಗೆ ದಾರಿ

*(ಸಂಗ್ರಹ)*



■ ಎಚ್.ಕೆ. ನಳಿನಿ ಪ್ರಶಾಂತ್


**ಲೇಖನಗಳನ್ನು ಕಳುಹಿಸಬೇಕಾದ ವಿಳಾಸ:**

**ಕೆ.ಎಸ್. ಮಧುಸೂದನ**
ಸಂಪಾದಕರು, 'ಬೃಹಚ್ಚರಣ'
#155ವೈ, 3ನೇ ಮುಖ್ಯರಸ್ತೆ, 7ನೇ ಬ್ಲಾಕ್,
4ನೇ ಫೇಸ್, ಬನಶಂಕರಿ 3ನೇ ಹಂತ,
ಬೆಂಗಳೂರು–560 085. ಮೊ: 99021 45359


ದಯವಿಟ್ಟು ಲೇಖನಗಳೊಂದಿಗೆ ನಿಮ್ಮ ಪಾಸ್‌ಪೋರ್ಟ್‌ನ ಸೈಜಿನ ಛಾಯಾಚಿತ್ರವನ್ನು ಕಳುಹಿಸಿ.

## ನೆನಪಿನಾಳದಿಂದ ಛಾಯಾಚಿತ್ರ - 7 ಮತ್ತು 8



ಕಿತ್ತಿಗಾನಹಳ್ಳಿ ತಿಮ್ಮಪ್ಪಯ್ಯನವರ ಅವಿಭಕ್ತ ಕುಟುಂಬ – 1930



ಶ್ರೀ ಎ.ವಿ. ಲಕ್ಷ್ಮಣ ಅಯ್ಯರ್ ಅವರ ಅವಿಭಕ್ತ ಕುಟುಂಬ – 1963



# ಅಡುಗೆ

## ದಿಡೀರ್ ದೋಸೆ

**ಬೇಕಾದ ಸಾಮಗ್ರಿ**

**ಚಿರೋಟಿರವೆ – 1 ಕಪ್**
**ಗೋದಿಹಿಟ್ಟು – 1 ಕಪ್**
**ಮೊಸರು (ಹಿಟ್ಟು ಕಲಿಸಲು)**
**ಕೊತ್ತಂಬರಿ ಸೊಪ್ಪು**
**ಹಸಿಮೆಣಸಿನಕಾಯಿ**
**ರುಚಿಗೆ ತಕ್ಕಷ್ಟು ಉಪ್ಪು**

**ಮಾಡುವ ವಿಧಾನ**

ಮೊದಲಿಗೆ ಚಿರೋಟಿ ರವೆ ಹಾಗೂ ಗೋದಿಹಿಟ್ಟನ್ನು ಸ್ವಲ್ಪ ಮೊಸರಿನಲ್ಲಿ ಹಾಕಿ ಚೆನ್ನಾಗಿ ಕಲಸಿ ಜೊತೆಗೆ ಮಿಕ್ಕ ಪದಾರ್ಥಗಳನ್ನು ಹಾಕಿ ನೀರಿನಲ್ಲಿ ದೋಸೆ ಹಿಟ್ಟಿನ ಹದಕ್ಕೆ ಕಲಸಿ, ಅರ್ಧಗಂಟೆಯ ನಂತರ ದೋಸೆ ಹಾಕುವುದು.

**ರಾಗಿ ದೋಸೆ :** ರಾಗಿಹಿಟ್ಟು ಹಾಗೂ ಉದ್ದಿನಹಿಟ್ಟನ್ನು ಸಮಪ್ರಮಾಣದಲ್ಲಿ ಕಲೆಸಿ ಮತ್ತೆ ಮೊಸರು, ಕೊತ್ತಂಬರಿಸೊಪ್ಪು, ಹಸಿಮೆಣಸಿನಕಾಯಿ, ರುಚಿಗೆ ತಕ್ಕಷ್ಟು ಉಪ್ಪು ಹಾಕಿ ನೀರಿನೊಂದಿಗೆ ದೋಸೆ ಹಿಟ್ಟಿನ ಹದಕ್ಕೆ ಕಲಸಿ, ಅರ್ಧಗಂಟೆಯ ನಂತರ ದೋಸೆ ಹಾಕಿ, ಪುದೀನ ಅಥವಾ ಕಾಯಿ ಚಟ್ನಿಯೊಂದಿಗೆ ತಿಂದರೆ, ರುಚಿಯಾದ ದಿಢೀರ್ ದೋಸೆ ತಯಾರು.



■ ಎಂ.ಆರ್. ಸೂರ್ಯನಾರಾಯಣ್



## ಅಭಿನಂದನೆಗಳು

**ನಮ್ಮ ಸಮುದಾಯದ ಶ್ರೀಮತಿ ಗಾಯತ್ರಿ ಶೇಷಾಚಲರವರು AVECT ರವರು ನಡೆಸುವ 2012–13ರ ವಾಸ್ತು ಹಾಗೂ ಜ್ಯೋತಿಷ್ಯ ಶಾಸ್ತ್ರಗಳ ಪರೀಕ್ಷೆ "ಜ್ಯೋತಿಷ್ಯ ಪ್ರಾಜ್ಞ" ಹಾಗೂ "ವಾಸ್ತು ಶಾಸ್ತ್ರ ಪ್ರಾಜ್ಞ" ಪರೀಕ್ಷೆಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಇವರಿಗೆ ಬೃಹಚ್ಚರಣ ಸಂಘವು ಶುಭ ಹಾರೈಸುತ್ತದೆ.**



# ಸ್ವಲ್ಪ ನಕ್ಕುಬಿಡಿ

## ಫ್ರೀ

ಈ 'ಫ್ರೀ' ಜಾತ್ರೆಗೆ ಎಲ್ಲರೂ ನಾ ಮುಂದು ತಾ ಮುಂದು ಎಂದು ನುಗ್ಗುತ್ತಿದ್ದಾರೆ.

ಕೆಲವು ಈಚಿನವು; ಒಬ್ಬ ಕಾರ್ ಡೀಲರ್ ಜಾಹೀರಾತು ನೀಡಿದ್ದಾನೆ. ನಮ್ಮಲ್ಲಿ ಒಂದು ಕಾರ್ ಖರೀದಿಸಿದಲ್ಲಿ ಒಂದು ಕಾರ್ ಫ್ರೀ ಆಗಿ ನೀಡುತ್ತೇವೆ!

ನೋಡಿಲ್ಲವೇ ನಾವೆಲ್ಲ ಬಡ್ಡಿರಹಿತ ವಾಹನ ಸಾಲಗಳು ಕಂತು ರಹಿತ ಗೃಹ ಸಾಲಗಳು ಮತ್ತೆಲ್ಲ.

ಈ ಪರಿಕಲ್ಪನೆ ಶಾಲೆ ಹಾಗೂ ಮಾಧ್ಯಮದವರನ್ನು ಕೂಡ ಬಿಟ್ಟಿಲ್ಲ. ನಿಮ್ಮ ಇಬ್ಬರು ಮಕ್ಕಳನ್ನು ನಮ್ಮ ಶಾಲೆಗೆ ಸೇರಿಸಿದರೆ ಮೂರನೆಯ ಮಗುವಿನ ಅಡ್ಮಿಶನ್ ಫ್ರೀ! ನಮ್ಮ ದಿನಪತ್ರಿಕೆಯಲ್ಲಿ ಜಾಹೀರಾತು ಮಾಡಿದರೆ ಸ್ಟಾಲ್ ಒಂದು ಫ್ರೀ!

ಇದು ಹೋಗುತ್ತಿರುವ ವೇಗ ಹಾಗೂ ಧಾಟಿ ನಮ್ಮ ಊಹೆಗೆ ಮೀರಿದ್ದು. ಇವೆಲ್ಲ ಸಾಧ್ಯವೆಂದು ನಮಗೆ ಅನ್ನಿಸಿರಲಿಲ್ಲ. ಈವರೆವಿಗೆ ಆಗಿರುವುದನ್ನು ಗಮನಿಸಿದಲ್ಲಿ ಮುಂದೆ ಇನ್ನೇನು ಆಗಬಹುದೆಂಬ ಕಲ್ಪನೆ ಹೀಗಿದೆ:

ಒಂದು ಕ್ರಿಕೆಟ್ ಮ್ಯಾಚ್ ಸೀಸನ್ ಟಿಕೆಟ್ ಕೊಳ್ಳಿರಿ ಹಾಗೂ ಒಂದು ಸೀಸನ್ ಟಿಕೆಟ್ ಅನ್ನು ಫ್ರೀ ಆಗಿ ಪಡೆಯಿರಿ.

ನಮ್ಮ ಗುಡಿಯಲ್ಲಿ 2 ಅರ್ಚನೆಗಳನ್ನು ಮಾಡಿಸಿ ಒಂದು ಅರ್ಚನೆಯನ್ನು ಫ್ರೀ ಆಗಿ ಪಡೆಯಿರಿ!

ನಿಮ್ಮ ಮಗುವಿನ ಹೆರಿಗೆ ನಮ್ಮ ಆಸ್ಪತ್ರೆಯಲ್ಲಿ ಮಾಡಿಸಿಕೊಂಡಿದ್ದೇ ಆದರೆ ನಿಮ್ಮ ಮುಂದಿನ ಹೆರಿಗೆಯನ್ನು ನಾವು ಫ್ರೀ ಆಗಿ ಮಾಡುತ್ತೇವೆ.

ನಿಮ್ಮ ಶಸ್ತ್ರಚಿಕಿತ್ಸೆಯನ್ನು ನಮ್ಮ ಆಸ್ಪತ್ರೆಯಲ್ಲಿ ಮಾಡಿಸಿಕೊಂಡರೆ ನಿಮ್ಮ ಮುಂದಿನ ಶಸ್ತ್ರಚಿಕಿತ್ಸೆಯನ್ನು ಫ್ರೀ ಆಗಿ ಮಾಡುತ್ತೇವೆ!

ನಮ್ಮಲ್ಲಿ ಒಂದು ದೊಡ್ಡ ಫ್ಲಾಟ್ ಕೊಂಡರೆ ಚಿಕ್ಕದೊಂದು ಫ್ಲಾಟ್ ಅನ್ನು ಫ್ರೀ ಆಗಿ ಕೊಡುತ್ತೇವೆ ಎಂಬ ಆಕರ್ಷಕ ಸುದ್ದಿ ನೋಡುವ ದಿನಗಳು ದೂರವೇನೂ ಇಲ್ಲ!

ಸದ್ಯಕ್ಕಂತೂ ಈ 'ಫ್ರೀ ರಾಶಿಗಳ' ಆಕರ್ಷಣೆಯಲ್ಲಿ ಬಂಧಿಯಾಗಿದ್ದೇನೆ. ಎಲ್ಲಿ ಯಾವಾಗ, ಏನು 'ಫ್ರೀ' ಎಂದು ನೋಡುವುದರಲ್ಲಿ ಎಷ್ಟು ತಲ್ಲೀನನಾಗಿದ್ದೇನೆಂದರೆ ನನಗೆ 'ಫ್ರೀ' ಸಮಯವೇ ಇಲ್ಲ!



■ ನಂಜರಾಜ್

# ನಗು ಚಿರಯೌವ್ವನ

ನಗು ವಯಸ್ಸನ್ನು ಮರೆಸಬಲ್ಲದು, ಅರವತ್ತು ವರ್ಷದ ಅಜ್ಜ ತನ್ನ ಮೊಮ್ಮಕ್ಕಳ ಜೊತೆ ತಮಾಷೆಯಿಂದ ಮಾತನಾಡುವಾಗ ತನ್ನ ದೈಹಿಕ ವಯಸ್ಸನ್ನು ಮರೆತು ತಾನೂ ಮಕ್ಕಳಲ್ಲಿ ಒಂದಾಗುತ್ತಾನೆ.

ಆದ್ದರಿಂದಲೇ ಮಕ್ಕಳೊಡನೆ ಆಡುವುದು ಒಂದು ಉತ್ತಮ ಹವ್ಯಾಸ. ಅನೇಕ ವೈದ್ಯರು ಖಿನ್ನತೆ (depressim)ಯಿಂದ ನರಳುವವರಿಗೆ, ಈ ಹವ್ಯಾಸ ಬಳಸಿಕೊಳ್ಳಬಹುದೆಂದು ಸಲಹೆ ಕೊಡುತ್ತಾರೆ. ಜವಹರಲಾಲ್ ನೆಹರೂ, ಮಹಾತ್ಮಾಗಾಂಧಿ, ಮದರ್ ಥೆರಸ್ಸ ಮುಂತಾದ ಅನೇಕ ಪ್ರತಿಭಾನ್ವಿತ ವ್ಯಕ್ತಿಗಳು ಈ ಹವ್ಯಾಸವನ್ನು ಬೆಳೆಸಿಕೊಂಡಿದ್ದರು. ಮಾಜಿ ರಾಷ್ಟ್ರಪತಿಗಳಾದ ಅಬ್ದುಲ್ ಕಲಾಂ ಅವರು ಮಕ್ಕಳೊಡನೆ ಒಡನಾಟವನ್ನು ಇಚ್ಛಿಸುತ್ತಾರೆ.

### ನಗುವಿನ ಕಲೆಯನ್ನು ಅಭ್ಯಾಸ ಮಾಡಿಕೊಳ್ಳುವುದು ಹೇಗೆ?

1) ನಗೆ ನಾಟಕ, ಹಾಸ್ಯಭರಿತ ಸಿನಿಮಾ, ಹಾಸ್ಯದಿಂದ ಕೂಡಿದ ಟಿ.ವಿ. ಕಾರ್ಯಕ್ರಮಗಳನ್ನು ನೋಡುವುದು.
2) ಟಿ.ವಿ.ಯಲ್ಲಿ ಕಾರ್ಟೂನ್ ಕಾರ್ಯಕ್ರಮಗಳನ್ನು ವೀಕ್ಷಿಸುವುದು.
3) ಹಾಸ್ಯ ಬರಹಗಳನ್ನು ಓದುವುದು.
4) ನಗೆಕೂಟಗಳಲ್ಲಿ ಭಾಗವಹಿಸಿ, ಹೊಸ ಸ್ನೇಹಿತರೊಡನೆ ವಿಚಾರ ವಿನಿಮಯ ಮಾಡುವುದು.
5) ಗಮನಿಸಿದ ಹಾಸ್ಯ ಸನ್ನಿವೇಶಗಳನ್ನು, ಕಂಡ ಹಾಸ್ಯದೃಶ್ಯಗಳ ವಿವರಣೆಯನ್ನು, ಕೇಳಿದ ಹಾಸ್ಯ ತುಣುಕುಗಳನ್ನು ಒಂದು ಪುಸ್ತಕದಲ್ಲಿ ಬರೆದಿಟ್ಟುಕೊಂಡು, ಆಗಾಗ್ಗೆ ಓದುವುದು ಮತ್ತು ಹೊಸಬರಲ್ಲಿ ಹಂಚಿಕೊಳ್ಳುವುದು.
6) ಪ್ರತಿ ಸನ್ನಿವೇಶದಲ್ಲಿ, ಇತರರ ಪ್ರತಿ ಮಾತುಕತೆಗಳಲ್ಲಿ ಹುದುಗಿರುವ ಹಾಸ್ಯದ ಅಂಶಗಳನ್ನು ಎಚ್ಚರಿಕೆಯಿಂದ ಹುಡುಕಿ ಪತ್ತೆ ಮಾಡಿ ಬರೆದಿಡುವುದು.
7) ಮಕ್ಕಳ ಮುಗ್ಧ ಪ್ರಶ್ನೆಗಳು, ಅಮಾಯಕ ವರ್ತನೆಗಳನ್ನು ಗಮನಿಸಿ ಸಂತೋಷಪಡುವುದು.
8) ಮನೆಯಲ್ಲಿ ಇತರರನ್ನು (ಗಂಡ, ಹೆಂಡತಿ, ಮಕ್ಕಳು, ಅಣ್ಣ ತಮ್ಮಂದಿರು) ಅವರ ಮನಸ್ಸಿಗೆ ನೋವಾಗದಂತೆ ಆಗಾಗ ಲಘುವಾಗಿ ಛೇಡಿಸಿ, ತುಂಟಾಟಗಳಿಂದ ತಮಾಷೆ ಸನ್ನಿವೇಶಗಳನ್ನು ಉಂಟುಮಾಡುವುದು.
9) ಮನೆಯಲ್ಲಿ ತುಂಬಾ ಹಳೆಯ ಫೋಟೋ ಆಲ್ಬಮ್‌ಗಳನ್ನು ಹೊರ ತೆಗೆದು, ಎಲ್ಲರೂ ಒಂದೆಡೆ ಸೇರಿ ತಮ್ಮ ತಮ್ಮ ಮುಖಚಿತ್ರಗಳನ್ನು ನೋಡುವುದು, ಎಲ್ಲರ ಅಂದಿನ ಅಂದ ಆಕಾರಗಳನ್ನು, ಇಂದಿನ ಅಂದ ಆಕಾರಕ್ಕೆ ಹೋಲಿಸಿಕೊಂಡು ನೋಡಿ ಆನಂದಿಸುವುದು.
10) ಶುಭಕಾರ್ಯಗಳು, ಸಮಾರಂಭಗಳು, ಪಾರ್ಟಿಗಳು ನಡೆದಾಗ ಎಲ್ಲರೊಡನೆ ಕೂತು ಹಾಸ್ಯ ಚಟಾಕಿಗಳನ್ನು ಹೇಳಿ, ಕೇಳಿ ನಲಿಯುವುದು.
11) ನಾವು ಚಿಕ್ಕವರಾಗಿದ್ದಾಗ, ಶಾಲೆ ಕಾಲೇಜುಗಳಲ್ಲಿ ನಡೆದ ತುಂಟಾಟಗಳನ್ನು ನೆನಪಿಸಿಕೊಂಡು ಮನಸ್ಸಲ್ಲೆ ನಗುವುದು.
12) ನಗುವನ್ನು ಅಭ್ಯಸಿಸಬೇಕು. ಅದಕ್ಕಾಗಿ ವಿಶೇಷ ದೃಷ್ಟಿಯಿಂದ ಹುಡುಕಬೇಕು. ದೃಷ್ಟಿ ವಿಶೇಷವಾಗಿದ್ದರೆ, ಸೃಷ್ಟಿಯೂ ವಿಶೇಷ.
13) ಹಾಸ್ಯಗಾರ ತನ್ನನ್ನು ತಾನು ಛೇಡಿಸಿಕೊಳ್ಳಬೇಕು. ತನ್ನ ಅಬಲತೆಗಳ ಬಗ್ಗೆ ನಗಬೇಕು. ಬೇರೆಯವರನ್ನು ಛೇಡಿಸಿ ಕೊಂಡಂತೆ, ತನ್ನನ್ನು ಬೇರೆಯವರು ಛೇಡಿಸಿದಾಗ ಅದನ್ನು ಅನುಭವಿಸಬೇಕು.

ಭಾವನೆಗಳಿಗೆ ಪದಗಳಿರುವುದಿಲ್ಲ. ಬಯಕೆಗಳು ಪ್ರಾರ್ಥನೆಗಳಾಗಿರುವುದಿಲ್ಲ. ಆದರೆ ನಗು ಹಾಗಲ್ಲ. ಅದು ನಿಮ್ಮೊಬ್ಬರಿಗೇ ಅಲ್ಲ, ಬೇರೆಯವರಿಗೂ ಸಂತಸ ನೀಡುತ್ತದೆ.

ನೀ ಜಗಕೆ ಬಂದಾಗ ನೀ ಅಳುತಲಿದ್ದಾಗ ಜಗ ನಗುತಲಿತ್ತು, ನೀ ಜಗವ ಬಿಡುವಾಗ ನೀ ನಗಲಿರಬೇಕು. ಜಗವಳುತಲಿರಲಿ.

*ನಗುವು ಸಹಜ ಧರ್ಮ, ನಗಿಸುವುದು ಪರಧರ್ಮ*
*ನಗುವ ಕೇಳುತ ನಗುವುದತಿಶಯದ ಧರ್ಮ*
*ನಗುವ ನಗಿಸುವ ನಗಿಸಿ ನಗುತ ಬಾಳುವ ವರವ*
*ಮಿಗೆ ನೀನು ಬೇಡಿಕೊಳೊ... ಮಂಕುತಿಮ್ಮ.*



■ ಆರ್.ಎನ್. ವೆಂಕಟಸುಬ್ಬರಾವ್
(ನಟರಾಜ)

## ಅರ್ಧಾಂಗಿ

*ರೀ! ಎಂದು ಕೂಗಿ ಹೇಳಿದಳು ಅರ್ಧಾಂಗಿ*
*ಪೇಟೆಗೆ ಹೋಗಿ ತನ್ನಿ ಅರ್ಧ ಕೆ.ಜಿ. ಮೂಲಂಗಿ*
*'ಸರಿ' ಎಂದು ನಾನು ಧರಿಸಿ ಒಂದು ಲುಂಗಿ*
*ಮೇಲೆ ಒಂದು ಅಂಗಿ, ಹೊರಟೆ ತರಲು ಮೂಲಂಗಿ*
*ಅರ್ಧದಾರಿಯಲ್ಲೇ ಕಂಡಳು ಒಬ್ಬಳು ಸುಂದರಾಂಗಿ*
*ಅವಳ ಚೆಲುವನ್ನು ನೋಡುತ್ತಾ ನಿಂತಲ್ಲೇ ನಿಂತೆ ಮಂಕಾಗಿ*
*ಹಿಂತಿರುಗಿ ಮನೆಗೆ ಬಂದಾಗ ತರಲು ಮರೆತಿದ್ದೆ ಮೂಲಂಗಿ*
*ವಿಷಯ ತಿಳಿದಾಗ ಹೇಳಿದಳು ಅರ್ಧಾಂಗಿ*
*ನಿಜವಾಗಿಯೂ ನೀವು ಒಂದು ಕಮಂಗಿ*

## ಭಕ್ತಿ

ಆಯಿತು ದೇವರ ಉತ್ಸವ ಮೊನ್ನೆ
ಖಾಲಿಯಾಯಿತು ನೂರಾರು ಪ್ರಸಾದದ ದೊನ್ನೆ
ಆದರೆ, ಭಕ್ತರಲ್ಲಿ ಭಕ್ತಿ ಮಾತ್ರ ಸೊನ್ನೆ



■ ಎಚ್.ಪಿ. ರಾಮಕೃಷ್ಣ

## ಬೃಹಚ್ಚರಣ–ಕನ್ನಡ : ದ್ವಿಭಾಷಿಕ ನಿಘಂಟು

58. **ಚಿಣಕಂಡು**–ಹೇಳಿಕೊಳ್ಳಲಾಗದ ಸಣ್ಣಪುಟ್ಟ ಹಿಂಸೆ ನೀಡುವುದು; ಕಿರುಕುಳ.
ಅವ್ರು ಎನಕು ಶಾನೆ **ಚಿಣಕಂಡು** ಕುಡಾಕ್ರೊ. ಅವನು ನನಗೆ ತುಂಬಾ ಹಿಂಸೆ ನೀಡುತ್ತಾನೆ.
<ಕಿಣಖಂಡ – ಸಂಸ್ಕೃತ
**ಕಿಣ**=ಹೆಗಲಿನ ಮೇಲೆ ಅಸ್ತ್ರದಿಂದಾದ ಗಾಯ, **ಖಂಡ**=ಮಾಂಸ.

59. **ಚೂಡು**(ನಾ)– **'ಚಿಣಕಂಡು'** ಎಂಬ ಶಬ್ದದ ಅರ್ಥವೇ ಇದಕ್ಕೂ ಅರ್ಥ.
ಅಂದ್ ಚಿರಿ ಪಣ್ಣು ತಾಯಾರ್ಕು ಬಲೆ **ಚೂಡು** ಕುಡುಕ್ರಾಳ್ದೆ. ಆ ಚಿಕ್ಕ ಹುಡುಗಿ ತಾಯಿಗೆ ತುಂಬಾ ಕಿರುಕುಳ ಕೊಡುತ್ತಾಳೆ. <ಸುಡು ದ್ರಾವಿಡ

60. **ತೂಮೆ**(ನಾ) ಬಹಿಷ್ಟೆ, ಮುಟ್ಟು
ಅವಾಳ್ದೆ ಹಾತೆ ತೂಮೆ **ಚಿರಿಹಾ** ಅದೆ. ಅವರ ಮನೆಯಲ್ಲಿ ಮುಟ್ಟಿನ ಕೋಣೆ ಇದೆ.
<ದ್ರಾವಿಡ

61. **ಕನ್ನು**(ನಾ) ಕರು
ಪಶುವು **ಕನ್ನೆ** ಈನದೆ. ಹಸು ಕರುವನ್ನು ಈದಿದೆ.
**ಕನು**=(ತೆಲುಗು) ಈಯು <ದ್ರಾವಿಡ

62. **ಈನು**(ಕ್ರಿ) ಈಯು, ಕರುಹಾಕು
ಅಂದ್ ಪಶುವು ಒರು ವಾರುತ್ಲೆ **ಈನುದ್ದೆ**
ಆ ಹಸು ಒಂದು ವಾರದಲ್ಲಿ ಈಯುತ್ತದೆ.
<ದ್ರಾವಿಡ

63. **ಮೇದಕಸ್ತು** (ನಾ) ಸಾಧುಮನುಷ್ಯ
ಎಂದೆ ಸ್ನೇಹಿತು ಶಾನೆ **ಮೇದಕಸ್ತು**
ನನ್ನ ಸ್ನೇಹಿತ ತುಂಬಾ ಸಾಧು ಮನುಷ್ಯ
<ದ್ರಾವಿಡ

64. **ಕೊಲ್ಲೆ**(ನಾ) ಹೊಲ
ಇಂದ್‌ಸಲು **ಕೊಲ್ಲೇಲೆ** ಕೊಳ್ಳು ವೆರಪಣೆ ಪಣ್ಣವಾಳೆ
ಈ ಸಲ ಹೊಲದಲ್ಲಿ ಹುರುಳಿ ಬಿತ್ತನೆ ಮಾಡಿದ್ದಾರೆ.
<ದ್ರಾವಿಡ

65. **ವೆಯ್ಲು**(ನಾ) ಬಿಸಿಲು
ಇನ್ನಿಕಿ **ವೆಯ್ಲು** ಕಡಿಮೆ. ಈವತ್ತು ಬಿಸಿಲು ಕಡಿಮೆ.
**ವೆಯ್ಲು**>ಬಿಸಿಲು <ದ್ರಾವಿಡ.

■ ಮಧು

## ಮುಗ್ಧ ಮಕ್ಕಳು

2–10–2013ರಂದು ಗಾಂಧಿ ಜಯಂತಿ. ಬೃಹಚ್ಚರಣ ಸಂಘವು ಏರ್ಪಡಿಸಿದ್ದ ಒಂದು ದಿನದ ಪ್ರವಾಸಕ್ಕೆ ನಾನೂ ಹೊರಟಿದ್ದೆ. ಶಿಸ್ತಿನ ಸಿಪಾಯಿಗಳಂತೆ ಬಂಧುಗಳೆಲ್ಲಾ ಬೆಳಗ್ಗೆ 7.30ಕ್ಕೆ ಸರಿಯಾಗಿ ಸೇರಿ ಟಿ.ನರಸೀಪುರ, ತಲಕಾಡಿಗೆ ಪ್ರಯಾಣ ಬೆಳೆಸಿದೆವು.

ಕನಕಪುರದ ಹತ್ತಿರ ಬೆಳಗಿನ ಉಪಹಾರಕ್ಕಾಗಿ ಶ್ರೀ ವೀರಭದ್ರೇಶ್ವರ ದೇವಾಲಯದ ಆವರಣದಲ್ಲಿ ಬಿಸಿಉಪ್ಪಿಟ್ಟು, ರುಚಿಯಾದ ಕೇಸರಿಬಾತ್, ಗರಿಗರಿ ಆಂಬೊಡೆ ತಿನ್ನುತ್ತಿದ್ದ ಸಮಯದಲ್ಲಿ, ನನ್ನ ಜೊತೆಯಲ್ಲಿ ಬಂದಿದ್ದ ಸಂಘದ ಇತರ ಸದಸ್ಯರುಗಳು ತಮ್ಮ ತಮ್ಮ ಕ್ಯಾಮರಾಗಳಲ್ಲಿ ಸುಂದರ ಪ್ರಕೃತಿಯನ್ನು ಸೆರೆ ಹಿಡಿಯುತ್ತಿದ್ದರು.

ಅಲ್ಲೇ ಪಕ್ಕದಲ್ಲಿದ್ದ ಸರ್ಕಾರಿ ಕಿರಿಯ ಮಕ್ಕಳ ಶಾಲೆಯಿಂದ ಮಕ್ಕಳೆಲ್ಲರೂ ಗಾಂಧಿ ಜಯಂತಿ ಪ್ರಯುಕ್ತ ಕೈಯಲ್ಲಿ ಸಿಹಿಯನ್ನು ಹಿಡಿದುಕೊಂಡು ಬರುತ್ತಿದ್ದರು. ನನ್ನೊಡನೆ ಬಂದಿದ್ದ ಕೆಲ ಸದಸ್ಯರುಗಳು ಛಾಯಾಚಿತ್ರಗಳನ್ನು ತೆಗೆಯಲು ಮುಂದಾದರು. ಅಲ್ಲಿ ನಾಕಂಡ, ಆ ಮಕ್ಕಳ ಮುಖದ ಮುಗ್ಧತೆ, ಅವರ ಚಿತ್ರಗಳನ್ನು ತೆಗೆಸಿಕೊಳ್ಳಲು ನೀಡುತ್ತಿದ್ದ ಭಂಗಿ, ಕ್ಯಾಮರಾದಲ್ಲಿ ಮೂಡುತ್ತಿದ್ದ ಅವರ ಚಿತ್ರಗಳನ್ನು ನೋಡಲು ಕಾತರತೆ, ಚೊಕ್ಕವಾದ ಸಮವಸ್ತ್ರ ಇವನ್ನೆಲ್ಲಾ ನೋಡಿ ಆಶ್ಚರ್ಯ ಮತ್ತು ಸಂತೋಷವಾಯಿತು.

ಲ್ಯಾಪ್‌ಟಾಪ್, ಟಿ.ವಿ., ಮೊಬೈಲ್‌ಗಳ ನಡುವೆ ದಿನವಿಡೀ ಮುಳುಗಿ, ಹೊರಜಗತ್ತಿನ ಸಂಪರ್ಕದಿಂದ ಸಂಪೂರ್ಣವಾಗಿ ದೂರವಿರುವ ನಮ್ಮ ಮಕ್ಕಳಿಗೂ, ತಮ್ಮ ಛಾಯಾಚಿತ್ರ, ತಮ್ಮೂರಿನ ಪ್ರಕೃತಿ ಸೌಂದರ್ಯ ಹೇಗಿರಬಹುದೆಂಬ ಕುತೂಹಲದಿಂದ, ನಮ್ಮಲ್ಲಿಗೆ ಬಂದು ಮುಗ್ಧತೆಯಿಂದ ವಿವಿಧ ಪ್ರಶ್ನೆಗಳನ್ನು ಕೇಳುತ್ತಿದ್ದ ಹಳ್ಳಿಯ ಮಕ್ಕಳಿಗೂ ಇರುವ ವ್ಯತ್ಯಾಸ ಕಂಡು, ಗ್ರಾಮೀಣ ಮಕ್ಕಳ ಬಗ್ಗೆ ಮನಸ್ಸು ತುಂಬಿ ಬಂತು.

ಯಾಂತ್ರಿಕ ಬದುಕಿನ ನಮಗೂ ಪ್ರಕೃತಿಯ ಮಡಿಲಿನ ಬದುಕನ್ನು ಮೆಲಕು ಹಾಕುವಂತೆ, ಸದಾ ಮನಸ್ಸಿನಲ್ಲಿ ಸ್ಮರಣೀಯ ಸುಂದರ ಅನುಭವವನ್ನು ಮೂಡಿಸಿದ 'ಬೃಹಚ್ಚರಣ' ಸಂಘದ ಪ್ರವಾಸಕ್ಕೆ ಹ್ಯಾಟ್ಸ್ ಆಫ್...



■ ಟಿ.ಎಸ್. ನಾಗೇಶ್

## ಕೋರಿಕೆ

*ಆತ್ಮೀಯ ಬಂಧುಗಳೇ*

**ಸರ್ಕಾರ – ವಿಶ್ವವಿದ್ಯಾನಿಲಯಗಳು ನಡೆಸುವ ಪರೀಕ್ಷೆಗಳಲ್ಲಿ ಪದವಿ ಪಡೆಯುವುದು ವಿದ್ಯಾಭ್ಯಾಸದ ಒಂದು ಹಂತ ಹಾಗೂ ಪೋಷಕರಿಗೆ ಹೆಮ್ಮೆಯ ವಿಷಯ. ನಮ್ಮ ಸಮುದಾಯದ ಮಕ್ಕಳು ಯಾವುದೇ ಪದವಿ ಗಳಿಸಲಿ (ಬಿ.ಎ., ಬಿ.ಎಸ್.ಸಿ., ಬಿ.ಕಾಂ. ಇಂಜಿನಿಯರಿಂಗ್, ವೈದ್ಯಕೀಯ, ಸಂಗೀತ ಮುಂತಾದ) ಅವರ ಹೆಸರುಗಳನ್ನು ನಮ್ಮ ಪತ್ರಿಕೆ "ಬೃಹಚ್ಚರಣ"ದಲ್ಲಿ ಈ ಶೈಕ್ಷಣಿಕ ವರ್ಷದ ಫಲಿತಾಂಶದಿಂದಲೇ ಹೆಸರು ವಿವರ ಪ್ರಕಟಿಸುವ ತೀರ್ಮಾನ ಕೈಗೊಂಡಿದೆ. ಪದವಿ ಪಡೆದ ನಮ್ಮ ಸಮುದಾಯದ ಮಕ್ಕಳು ತೇರ್ಗಡೆಯಾದ ವಿವರ, ತಂದೆ–ತಾಯಿಯ ಹೆಸರಿನೊಂದಿಗೆ ಸಂಘದ ಯಾವುದೇ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಅಥವಾ ಸಂಪಾದಕರಿಗೆ ತಿಳಿಸಲು ಕೋರಿದೆ.**

ಅಧ್ಯಕ್ಷರು

# ದೀಪಾವಳಿ

ದೀಪಾವಳಿ ಎಂದರೆ ದೀಪಗಳ ಆವಳಿ, ದೀಪಗಳ ಸಾಲು, ಪೂಜೆ, ಹೊಸಬಟ್ಟೆ, ತಿಂಡಿ, ತಿನಿಸು, ಪಟಾಕಿ, ಉಡುಗೊರೆ ಗಳೊಂದಿಗೆ ಬಂಧು–ಬಳಗ, ಗೆಳೆಯರು, ನೆರೆಹೊರೆ ಎಲ್ಲರೊಂದಿಗೆ ವರ್ಷಕ್ಕೊಮ್ಮೆ ಆಚರಿಸುವೆವು.

ಕಾರ್ತೀಕ ಮಾಸದ ಮೊದಲ ದಿನ ಬಲಿಪಾಡ್ಯಮಿ. ಆಶ್ವಯುಜದ ಕೊನೆಯಲ್ಲಿ ನರಕ ಚತುರ್ದಶಿ ಮತ್ತು ಅಮಾವಾಸ್ಯೆಯ ದಿನ ಲಕ್ಷ್ಮಿಪೂಜೆ ಆಚರಿಸುವೆವು.

ಮಳೆಗಾಲದ ಕೊನೆಯಲ್ಲಿ ಬರುವ ದೀಪಾವಳಿ ಹಬ್ಬದಿಂದ ಒಂದು ತಿಂಗಳ ಕಾಲ ಮನೆಬಾಗಿಲ ಬಳಿ ಸಂಜೆಯ ಹೊತ್ತಿನಲ್ಲಿ ದೀಪ ಹಚ್ಚಿಡುತ್ತೇವೆ. ಹಿಂದಿನವರ ಪ್ರಕಾರ ಮಳೆಗಾಲದಲ್ಲಿ ಹುಳು–ಹುಪ್ಪಟೆಗಳು ಬಿಲ, ಹುತ್ತದಿಂದ ಹೊರಬಂದಿರುತ್ತದೆ. ಅವು ಮನೆಗಳ ಒಳಗೆ ಬರದಿರಲು ಈ ಕಾರ್ಯ ಆರಂಭವಾಯಿತಂತೆ.

ನರಕಚತುರ್ದಶಿಯಂದೇ ಶ್ರೀ ಕೃಷ್ಣ ಪರಮಾತ್ಮ ನರಕಾಸುರನನ್ನು ಕೊಂದು 16,000 ಸ್ತ್ರೀಯರನ್ನು ಸೆರೆಯಿಂದ ಬಿಡಿಸಿದ ದಿನ. ನರನಾದವನು ಚತುರ್ದಶಿ ಎಂದರೆ 14 ತತ್ತ್ವಗಳಾದ 5 ಜ್ಞಾನೇಂದ್ರಿಯ, 5 ಕರ್ಮೇಂದ್ರಿಯ, 4 ಅಂತಃಕರಣ ವೃತ್ತಿಯಾದ ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳನ್ನು ಭಗವಂತನ ಕಡೆ ತಿರುಗಿಸಬೇಕು. ಕಂ ಎಂದರೆ ಸುಖ. ಆದರೆ ನರನು ಪ್ರಪಂಚ, ಇಂದ್ರಿಯ ಸುಖದತ್ತ ತಿರುಗಿದಾಗ ಸುಖವು ಇಲ್ಲದಂತಾಗಿ ಬದುಕನ್ನು ನರಕ ಮಾಡಿಕೊಳ್ಳುತ್ತಾನೆ. ಈ ಹದಿನಾಲ್ಕನ್ನೂ ಬರೀ ಲೌಕಿಕ ವ್ಯವಹಾರಕ್ಕೇ ಬಳಸದೆ, ದಿನದ ಸ್ವಲ್ಪ ಹೊತ್ತಾದರೂ ಪರಮಾತ್ಮನ ಕಡೆ ತಿರುಗಿಸಲು ನಮಗೊಂದು ಉಪಾಯ ಭಗವಂತನೇ ಹೇಳಿಕೊಟ್ಟಿದ್ದಾನೆ.

ಮುಂದಿನ ಅಮಾವಾಸ್ಯೆ ತಮೋಗುಣದ ಪ್ರತೀಕ. ಅಂಧಕಾರ ಅಜ್ಞಾನ, ಕಳೆದುಕೊಳ್ಳಲು ಅಂದು ಜ್ಞಾನಶಕ್ತಿಯಾದ ಶ್ರೀ ಮಹಾಲಕ್ಷ್ಮಿಯನ್ನು ಪೂಜಿಸಿ ಜ್ಞಾನಜ್ಯೋತಿಯನ್ನು ಬೆಳಗಿಸಬೇಕು. ಮಹಾಲಕ್ಷ್ಮಿಯ ವಾಹನ ಗೂಬೆ. ಏಕೆಂದರೆ ಗೂಬೆ ಎನ್ನುವ ಪಕ್ಷಿ ರಾತ್ರಿಯೆಲ್ಲಾ ಎದ್ದಿದ್ದು ಹಗಲು ನಿದ್ರಿಸುತ್ತದೆ. ಅಂದರೆ ಕತ್ತಲಿನ ಅಜ್ಞಾನದ ಮೇಲೆ ಕುಳಿತು ವಿಹರಿಸುವ ದೇವಿಯ ಆರಾಧನೆ ನಮ್ಮ ಅಜ್ಞಾನವನ್ನು ಕಳೆಯುತ್ತದೆ.

ಮೂರನೇ ದಿನ ಬಲಿಪಾಡ್ಯಮಿ. ಚಕ್ರವರ್ತಿಯಾಗಿದ್ದ ಮಹಾದಾನಿ ಬಲಿಯನ್ನು ವಾಮನ ರೂಪದಲ್ಲಿ ಬಂದ ಮಹಾವಿಷ್ಣು ತ್ರಿವಿಕ್ರಮನಾಗಿ ಬೆಳೆದು ಪಾತಾಳಕ್ಕೆ ಕಳುಹಿಸಿದ ದಿನ. ಇದರ ಅರ್ಥ ಏನೆಂದರೆ, ಬಲಿ ಅಜ್ಞಾನದಲ್ಲಿ ಮುಳುಗಿ ಯಜ್ಞ ಎಂಬ ಕರ್ಮ ಮಾಡಿ ಮುಕ್ತಿ ಬಯಸಿದ್ದನು. ಆಗ ಚಿಕ್ಕ ವಟುವಾಗಿ ಬಂದವನು ಜಗನ್ನಿಯಾಮಕನಾದ ಭಗವಂತನು ಎಂದರಿತ. ಗುರು ಶುಕ್ರಾಚಾರ್ಯರು ಅಹಂಕಾರದಿಂದಲೇ ಬಲಿಗೆ ಸೂಚನೆ ಕೊಟ್ಟರು. ಆಗ ವಾಮನ ಅಜ್ಞಾನದ ಕಣ್ಣು ಮುಚ್ಚಿಸಿ ಜ್ಞಾನ ಕೊಟ್ಟನು. 3 ಹೆಜ್ಜೆದಾನ ಎಂದರೆ ಒಂದು ಭೂಮಿಯ ಮೇಲೆ, ಒಂದು ಆಕಾಶಕ್ಕೆ, ಮೂರನೆಯದನ್ನು ಬಲಿಯ ತಲೆ ಮೇಲೆ ಇಟ್ಟನು. ವಿಷ್ಣುವಾದ ಪರಬ್ರಹ್ಮನೇ ಸಕಲದರಲ್ಲೂ ಇರುವುದು ಅಲ್ಲದೆ ತನ್ನ ತಲೆಯಲ್ಲೂ, ತನ್ನಲ್ಲೂ ಇರುವುದೂ ಅದೇ ಎಂದು ಬಲಿ ಅರ್ಥೈಸಿದ ದಿನ. ಚಕ್ರವರ್ತಿ ಎಂಬ ಭಾವ ಬಲಿಯಾಗಿ ಪರಮಾತ್ಮನೆಂಬ ಭಾವ ತುಂಬಿಕೊಂಡು ಧನ್ಯವಾದ ದಿನ. ಆ ದಿನ ಬಲಿಯನ್ನು ನೆನೆದು ಆ ಮಟ್ಟಕ್ಕಲ್ಲದಿದ್ದರೂ ನಮ್ಮ ಕೈಲಾದಷ್ಟು ಸಾಧನೆ ಮಾಡಿ ಪರಮಾತ್ಮ ಸಾಯುಜ್ಯ ಪಡೆಯಲು ನಾವುಗಳೂ ಪ್ರಯತ್ನಿಸೋಣ.

■ ಆರ್. ರಮೇಶ್

# ಸತ್ಯ ದರ್ಶನ

ಒಬ್ಬೊಬ್ಬರದು ಒಂದೊಂದು ರೀತಿಯ ಮನಸ್ಸು, ಅದಕ್ಕೆ ಅವರು ಬೆಳೆದು ಬಂದ ಪರಿಸರವೂ ಪೂರಕ. ಮತ್ತೊಬ್ಬರನ್ನು ಹೊಗಳುವುದು ಅಥವಾ ತೆಗಳುವುದು, ಸಂದರ್ಭಕ್ಕೆ ತಕ್ಕಂತೆ ವರ್ತಿಸುವುದು, ಮನುಷ್ಯನ ಜಾಯಮಾನ.

"ನಡೆವವನು–ಎಡವನೇ" ಎಂಬಂತೆ ಯಾರು ತಪ್ಪು ಮಾಡುವುದಿಲ್ಲ? ಆದರೆ ಮಾಡಿದ್ದೆಲ್ಲಾ ತಪ್ಪು ಎಂದು, ಎಲ್ಲದಕ್ಕೂ ಮಾತಿನಲ್ಲಿ ಚುಚ್ಚಿ ಹಂಗಿಸುವುದು ಕೆಲವರ ಜಾಯಮಾನ. ಎಂದೂ–ಎಲ್ಲೂ ಅವರು ತಮ್ಮ ನಡತೆ ತಿದ್ದಿಕೊಳ್ಳದೆ, ಬರೀ ಅಸಹನೆ, ಗೊಣಗುವಿಕೆ, ಟೀಕೆ ಮಾಡುವುದರದಿಂದಲೇ ಕಾಲ ಕಳೆಯುತ್ತಾರೆ. ಇದರಿಂದ ಸಾಧನೆ ಏನೂ ಆಗುವುದಿಲ್ಲ. ಇಂತಹವರ ಮಾತಿಗೆ ಬೆಲೆಯೂ ಇರುವುದಿಲ್ಲ. ಸಮಾಜವೇ ಇವರನ್ನು ದೂರವಿಡುವುದನ್ನು ನಾವು ದಿನ ನಿತ್ಯ ನೋಡಬಹುದು.

ಸುಸಂಸ್ಕೃತರು–ಸಜ್ಜನ ಹಿರಿಯರು ತಪ್ಪಿ ನಡೆಯುವವರನ್ನು ಒಳ್ಳೆ ಮಾತಿನಿಂದಲೇ ತಿದ್ದುವರು. ಇದು ಸ್ವಾಗತ ಹಾಗೂ ಗೌರವ ಕೂಡ. ಯುವ ಜನಾಂಗ ತಪ್ಪು ಮಾಡಿದ್ದು ಅರಿವಾದಾಗ ತಪ್ಪಿಗೆ "ಕ್ಷಮೆ..." ಕೇಳುವುದು ತಪ್ಪಿಲ್ಲ. ಅಂತೆಯೇ ಹಿರಿಯರು ಹಂಗಿಸುವುದು–ಟೀಕಿಸುವುದು ಬಿಟ್ಟು ತಪ್ಪನ್ನು ಕ್ಷಮಿಸುವುದರಿಂದ ಅವರು ಸಮಾಜದ ಗೌರವಾನ್ವಿತ ವ್ಯಕ್ತಿಗಳಾಗುತ್ತಾರೆ. ಇದು ಜೀವನ–ಸತ್ಯ ದರ್ಶನ.



■ ಮಮತಾ ಶಿವಕುಮಾರ್

**ತಿರುಪತಿ ಸಂಪರ್ಕಕ್ಕೆ : ತಿರುಪತಿಯಲ್ಲಿ ಯಾವುದೇ ಶುಭ ಸಮಾರಂಭ ಮಾಡಬೇಕಿದ್ದಲ್ಲಿ, ಶ್ರೀ ಎಸ್.ಆರ್. ಉಮಾಕುಮಾರ್ ಅವರನ್ನು ಸಂಪರ್ಕಿಸಿ. (ದರ್ಶನ ಬಿಟ್ಟು) ಮೊ: 98491 58377, 09032 300677**

# ಸಂಘದ ಪ್ರಥಮ ಪ್ರವಾಸ

2-10-2013ರಂದು ಒಂದು ದಿನದ ಟಿ. ನರಸೀಪುರ ಹಾಗೂ ತಲಕಾಡು ಕ್ಷೇತ್ರ ಪ್ರವಾಸವನ್ನು ಬೃಹಚ್ಚರಣ ಸಂಘವು ಏರ್ಪಡಿಸಿತ್ತು.

ಬೆಳಗ್ಗೆ 7.30ಕ್ಕೆ ಎಸ್.ಆರ್.ಎಸ್. ಬಸ್ಸಿನಲ್ಲಿ 45 ಬಂಧುಗಳು ಬಸವನಗುಡಿ ದ್ವಾರಕಾನಾಥ ಭವನದಿಂದ ಹೊರೆಟೆವು. ಸದಸ್ಯ ಟಿ.ಎಸ್. ರಮೇಶ್‌ರವರು ಸ್ವಾಗತ ಕೋರಿ, ಪ್ರವಾಸ ಸುಖಕರ ವಾಗಿರಲೆಂದು ಹಾರೈಸಿದರು. ನಂತರ 'ಬೃಹಚ್ಚರಣ' ಸಂಚಿಕೆಯನ್ನು ಬಿಡುಗಡೆ ಮಾಡಿ ವಿತರಿಸಲಾಯಿತು. ಟಿ.ಎಸ್. ಕೃಷ್ಣನ್ ಕುಟುಂಬದವರು ಕಳಿಸಿದ ಚುರುಮುರಿ ತಿಂಡಿಗಳನ್ನು ಎಲ್ಲರೂ ಸವಿಯಲು ಪ್ರಾರಂಭಿಸಿದರು.

ಸದಸ್ಯೆ ಶ್ರೀಮತಿ ಶುಭಾ, ಶ್ರೀ ಗೋವಿಂದ್‌ರವರು, ಕನಕಪುರದಲ್ಲಿ ಶ್ರೀ ಕಾರಂತರ ಸಹಕಾರದಿಂದ ತಯಾರಿಸಿದ ರುಚಿಕರ ಕೇಸರಿಬಾತ್, ಉಪ್ಪಿಟ್ಟು, ಮಸಾಲೆವಡೆ ಹಾಗೂ ಕಾಫಿಯನ್ನು ಶ್ರೀ ವೀರಭದ್ರೇಶ್ವರ ದೇವಾಲಯದಲ್ಲಿ ನಾವುಗಳೆಲ್ಲ ಸ್ವೀಕರಿಸಿದ ನಂತರ ಟಿ.ನರಸೀಪುರ ಕಡೆಗೆ ಹೊರಟೆವು.

ತಿರಮಕೂಡಲು ನರಸೀಪುರದಲ್ಲಿ ಕಾವೇರಿ, ಕಪಿಲಾ, ಗುಪ್ತಗಾಮಿನಿಯ ದರ್ಶನ ಮಾಡಿ, ಕೆಲವರು ನದಿಯಲ್ಲಿ ಪುಣ್ಯಸ್ನಾನ ಮಾಡಿ ಪುನೀತರಾದರು. ಅಗಸ್ತ್ಯೇಶ್ವರ, ಅಗಸ್ತ್ಯ ಮಹರ್ಷಿ ಆಶ್ರಮ, ಮಾಂಗಲ್ಯ ಪಾರ್ವತಿ ದೇವಸ್ಥಾನ, ಗುಲಗಂಜಿ ನರಸಿಂಹ ದೇವಾಲಯಗಳ ವೀಕ್ಷಣೆಯ ನಂತರ, ಶ್ರೀ ಸೂರ್ಯನಾರಾಯಣ ದೀಕ್ಷಿತರ ಅತಿಥ್ಯದಲ್ಲಿ ಸವಿಭೋಜನ ಮುಗಿಸಿ, ತಲಕಾಡಿನ ಕಡೆಗೆ ಪ್ರವಾಸವನ್ನು ಮುಂದುವರೆಸಿದೆವು. ಅಲ್ಲಿ ಪುರಾತನ ಈಶ್ವರ ದೇವಾಲಯ ಹಾಗೂ ಅಮ್ಮನವರ ದರ್ಶನ ಮಾಡಿ ಕೃತಾರ್ಥರಾದೆವು.

ಕಾವೇರಿ ನದಿಯಲ್ಲಿ ದೋಣಿ ವಿಹಾರದೊಂದಿಗೆ ಮರಳು ಹಾಗೂ ನದಿ ನೀರಿನಲ್ಲಿ ಎಲ್ಲ ಸದಸ್ಯರು ಆಬಾಲವೃದ್ಧರಾಗಿ ಆಟವಾಡಿದ್ದು ಸ್ಮರಣೀಯ.

ಹಿಂತಿರುಗುವಾಗ ಮತ್ತೆ ಕನಕಪುರದಲ್ಲಿ ರುಚಿಯಾದ ಪುಳಿಯೋಗರೆ, ಮೊಸರನ್ನವು ರಾತ್ರಿಯ ಭೋಜನಕ್ಕೆ ಕೈಬೀಸಿ ನಮ್ಮನ್ನು ಕರೆಯಿತು. ಶ್ರೀ ರಮೇಶ್‌ರವರು ಕಾರ್ಯಕಾರಿ ಸಮಿತಿಯವರಿಗೆ, ಬಸ್ ವ್ಯವಸ್ಥೆ ಮಾಡಿದವರಿಗೆ, ಬಸ್ ಸಿಬ್ಬಂದಿಗೆ ಹಾಗೂ ಆಹಾರದ ವ್ಯವಸ್ಥೆ ಮಾಡಿದವರಿಗೆ ವಂದಿಸಿದರು.

ಪ್ರವಾಸದ ಸವಿನೆನಪುಗಳೊಂದಿಗೆ ಯಾವ ತೊಂದರೆಯೂ ಇಲ್ಲದೆ ಮನೆಗಳಿಗೆ ಸಂತಸದಿಂದ ತಲುಪಿದೆವು.



■ ಟಿ.ಎಸ್. ರತ್ನ ರಮೇಶ್

## A to Z

A ನಿದು ಈ ಪೈಪೋಟಿ
B ಡದ ನಿರಂತರದ ಹೋರಾಟ
C ರಿವನ್ತರಿಗೆ ಬೆಲೆ ಇಲ್ಲಿ
D ಗ್ರೀ ಗಳ ಪಡೆದೋ ಪ್ರಯೋಜನವಿಲ್ಲ
E ನ್ನಿಷ್ಟು ಪ್ರಯತ್ನಪಟ್ಟರೂ ಕೆಲಸವಿಲ್ಲ
F ಫಾರ್ಮ್ಸ್ ಎಷ್ಟು ಹಾಕಿದರೂ ಸಾಲಲ್ಲ
G ವನದ ದಾರಿ ಕಾಣುತ್ತ ಇಲ್ಲ
H ಆಗ್ತಾ ಇರೋ ಈ ಜನಸಂಖೆಯಲ್ಲಿ
I ಯ್ಯೋ ನನ್ನ ಕಥೆ ಏನೋ ಗೊತ್ತಿಲ್ಲ
J ಬು ಕಳ್ಳನಾಗೋಣ ಅಂದ್ರೆ
K ಟ್ಟತನ ಕಳ್ಳತನ ಕಲಿತಿಲ್ಲ
L ಲ್ಲಾದ್ರು ಸಿಕ್ಕಿ ಹಾಕಿಕೊಂಡರೆ ಅನ್ನುವ ತಳಮಳ
M ಮ್ಮ ಕಾಯೋ ಕೆಲಸವಾದರೂ ಸಿಗುತ್ತಾ ಅಂದುಕೊಂಡಾಗ
N ಥ ಗತಿ ಬಂತಪ್ಪಾ ಅನಿಸುತ್ತದೆ
O ಬ್ಬನಾದರೂ ಎಲ್ಲೂ ಕರೆಯೋಲ್ಲ
P ಶಾಚಿಗಳ ಹಾಗೆ ಅಲೆಅಲೆದು ಅರ್ಜಿ ಹಾಕಲು
Q ನಲ್ಲಿ ನಿಲ್ಲುವ ತ್ರಾಣವಿಲ್ಲ
R ಮವಾಗಿ ಮನೇಲಿ ಇರೋಣ ಅಂದ್ರೆ
S ಅಂತ ಹೇಳುವವರಿಲ್ಲ
T ಕೆ ಟಿಪ್ಪಣಿಗಳಿಗೇನು ಕೊರತೆಯಿಲ್ಲ
U ವ ಪೀಳಿಗೆಗಳ ಈ ಸಮಸ್ಯೆಯನ್ನು
W ವರ್ಡ್ಸ್‌ನಲ್ಲಿ ವಿವರಿಸಲಾಗೋಲ್ಲ
X ಟ್ರ ಏನಾದ್ರು ಕಲಿಯೋಣ ಅಂದ್ರೆ
Y ಯಸ್ಸಾಗಿ ತಲೆಗೆ ಹತ್ತೋಲ್ಲ
ಹೀಗಾಗಿ
Z 00 ನಲ್ಲಿ ಇರುವ ಪ್ರಾಣಿಯ ಹಾಗೆ ಗೊಂದಲದಲ್ಲಿ ಸಿಕ್ಕಿ ಬಿದ್ದ ಮಾನವ ನಾನು...

■ ಪದ್ಮರಾಮನ್ ರಮೇಶ್

## ಶಾರದಾ ಸ್ತುತಿ

*ರಾಗ : ಹಂಸಧ್ವನಿ*

ಸರಸ್ವತಿ ನೀನೆ ಮಹಾಶಕ್ತಿ ವಿದ್ಯೆಗೇ ।
ದೇವಿ ಶಾರದಾಂಬೆ ॥ ಪ ॥

ಅಜ್ಞಾನಿಗಳಿಗೇ ಜ್ಞಾನದಾತೆ ।
ಒಲಿಯುತೆ ನಮ್ಮನೂ ಪೊರೆಯೌ ಮಾತೆ ॥ಅ.ಪ.॥

ಕರುಣಾಕರೇ ನೀ ಅಭಯವ ನೀಡೌ ।
ಕರವನು ಮುಗಿಯುತೆ ಬೇಡುವೆ ನಿನ್ನನೂ ।
ವರವನು ಕೊಡುತಲೀ ಕೃಪೆ ತೋರು ಭಾರತಿ ॥1॥

■ ನಡವತ್ತಿ ಗೋಪಾಲಯ್ಯ

## ಭಾಷಣಕ್ಕೆ ಮಾರ್ಗದರ್ಶಿ

- ಮಾತು ಆರಂಭಿಸುವ ಮುನ್ನ ಗಣ್ಯರಿಗೆ ನಮನ.
- ಗುರುಹಿರಿಯರಿಗೆ ನನ್ನ ಪ್ರಾರ್ಥನೆ.
- ಕಿರಿಯರಿಗೆ ಮತ್ತು ಸಹಪಾಠಿಗಳಿಗೆ ಶುಭ ಹಾರೈಕೆ.
- ಲಭಿಸಿರುವ ವಿಷಯ ಪ್ರಸ್ತಾವನೆ.
- ಮಾತನಾಡುವಾಗ, ಮಾತಾಡಲು ಹುರುಪು ಇರಲಿ.
- ಕಂಠಪಾಠ ಮಾಡುವುದು ಬೇಡ. ಅದು ಮುಖದ ಮತ್ತು ಆಂಗಿಕ ಭಾಷೆಯನ್ನು ತೆಗೆದು ಬಿಡುತ್ತದೆ.
- ಹತ್ತಾರು ಬಾರಿ ಬರೆದು, ಓದಿ, ವಿಷಯ ಗ್ರಹಿಸಿ.
- ಸಭಿಕರನ್ನು ಕಂಡಾಗ ಕಂಪನ ಬೇಡ. ಧೈರ್ಯ ಇರಲಿ.
- ನಿಮ್ಮ ಮುಂದೆ ಮೈಕ್ರೋಫೋನ್ ಇಲ್ಲವೆಂದು ಭಾವಿಸಿ ನೈಜವಾಗಿ ಮಾತನಾಡಿ.
- ಹೇಳುವುದು ಸರಳ ಸ್ಪಷ್ಟ ನಿಖರವಾಗಿರಲಿ.
- ನಿಮ್ಮ ಮಾತನ್ನು ಸಭಿಕರು ಆಸಕ್ತಿಯಿಂದ ಆಲಿಸುವುದನ್ನು ಗಮನಿಸಿ.
- ವೇದಿಕೆಯ ಮೇಲೆ ನಿಮ್ಮ ನಿಲುವು ಶಿಸ್ತಿನಿಂದರಲಿ, ಹುಡುಗಾಟ ಬೇಡ.
- ಮಾತಲ್ಲಿ ನಗು ಬೆರೆತಿರಲಿ, ನಗೆಪಾಟಲು ಬೇಡ.
- ಸಮಯ ಪ್ರಜ್ಞೆ, ಅತಿ ಮುಖ್ಯ. ಅದಕ್ಕೆ ತಕ್ಕಂತೆ ಲಂಗು, ಲಗಾಮು ಹಾಕಿ.



■ ಜಿ.ಎಸ್. ಸತ್ಯಮೂರ್ತಿ

## ಗಣೇಶ ಸ್ತುತಿ

ಬಾರೋ ಗಣಪ ಬಾರೋ ।
ಬಾಲ ಗಣಪ ಬಾರೋ ।
ಸಿದ್ಧಿಯೊಡನೆ ಬಾರೋ ।
ಬುದ್ಧಿ ಕಲಿಸೈ ಬೇಗ ॥ ಪ ॥

ಪ್ರಥಮ ಪೂಜ್ಯ ಬಾರೋ ।
ತ್ರಿಜಗ ವಂದಿತ ಬಾರೋ ।
ಮಕ್ಕಳನ್ನು ಹರಸೋ ।
ವಿದ್ಯೆ ಕಲಿಸಲೆಂದೂ ॥ ಅ.ಪ. ॥

ಸಂಕಷ್ಟ ಹರನೆ ಬಾರೋ ।
ಸರ್ವಶ್ರೇಷ್ಠ ಬಾರೋ ।
ಸಂಕುಚಿತವ ಕಳೆದೂ ।
ಸದಾನಂದ ತಾರೋ ॥ ಚರಣ – 1 ॥

ಅಪರ್ಣ ತನಯ ಬಾರೋ ।
ಅನಂತ ಮಹಿಮ ಬಾರೋ
ಅರ್ಕ ಗಣಪ ಬಾರೋ ।
ಅಂಬಾವಂದಿತ ಬಾರೋ ॥ ಚರಣ – 2 ॥

ಬಾರೋ ಗಣಪ ಬಾರೋ ।
ಬಾಲ ಗಣಪ ಬಾರೋ ।
ಸಿದ್ಧಿಯೊಡನೆ ಬಾರೋ ।
ಬುದ್ಧಿ ಕಲಿಸೈ ಬೇಗ ॥ ಪ ॥

■ ಅಂಬಾ ನಡವತ್ತಿ

## ಕಾಲಚಕ್ರ

ನೋವು ನಲಿವಿನ ಜೀವನದಲಿ
ಸುಖ ದುಃಖಗಳ ಸಂಮಿಲನ ।
ಕಷ್ಟ ಸುಖಗಳ ಪರಂಪರೆಯಲಿ
ಆಚಾರ–ವಿಚಾರಗಳ ಅಮೃತಧಾರೆ ।
ಸಿರಿತನ ಬಡತನ ಜಂಜಾಟದಲಿ
ಬೇವು–ಬೆಲ್ಲ ಅನುಭವ ।
ಆಸೆ ಆಕಾಂಕ್ಷೆ ಹೊತ್ತ ಬಾಳಿನಲಿ
ಮೋಸ ವಂಚನೆಗಳ ಸರಮಾಲೆ ।
ಜೀವ–ಜೀವನ ಸೆಣಸಾಟದಲಿ
ಆತ್ಮ ಪರಮಾತ್ಮನ ಹುಡುಕಾಟ ।
ಸಜ್ಜನ ದುರ್ಜನರಿಂದಾದ ಸಮಾಜದಲಿ
ಸತ್ಯ ಮಿಥ್ಯ ಅನುಭವಗಳು ।
ಹುಟ್ಟು ಸಾವಿನ ನಿರಂತರ ಹೋರಾಟದಲಿ
ಕಾಲಚಕ್ರದ ಉರುಳಾಟ ।



■ ರಾಜಾಪುರ್ ರಾಜಗೋಪಾಲ್


## ನಗು

ತನ್ನೊಳಗೆ ನಗುವವನು ಜ್ಞಾನಿ
ತಾನೇ ನಗುವವನು ಹುಚ್ಚ
ತನ್ನ ಗೆಳತಿಯನ್ನು ನೆನೆದು ನಗುವವನು ಪ್ರೇಮಿ
ತನ್ನನ್ನೇ ಮೈಮರೆತು ನಗುವವನು ರಸಿಕ
ಇನ್ನೊಬ್ಬರನ್ನು ನೋಡಿ ನಗುವವನು ಗರ್ವಿ
ಇನ್ನೊಬ್ಬರಿಗಾಗಿ ನಗುವವನು ಅಯೋಗ್ಯ
ಇನ್ನೊಬ್ಬರಿಗೆ ನೋವಾಗುವಂತೆ ನಗುವವನು ಖಳನಾಯಕ
ನಕ್ಕು ಮನರಂಜನೆ ನೀಡುವವನು ವಿದೂಷಕ
ನಗುತ್ತಲೇ ವಿಜಯ ಸಾಧಿಸುವವನು ಬುದ್ಧಿವಂತ
ಗೆದ್ದರೂ ನಗದವನು ಕರ್ಮಯೋಗಿ.

*(ಸಂಗ್ರಹ)*



■ ಎಚ್.ಕೆ. ನಳಿನಿ ಪ್ರಶಾಂತ್



# ಕಣ್ಣ ಪೊರೆ

ಮಬ್ಬು ಮುಸುಕಿದ ಕಣ್ಣ ತೆರೆದರು
ಜಗತ್ತಿನ ಎದರು ಕಣ್ಣು ಇದ್ದರು
ಜಾತಿ, ಧರ್ಮ ಎಂಬ ಮನೆಯ ಕಟ್ಟಿ
ತಾನೇ ಕಟ್ಟಿಕೊಳ್ಳುತಿಹನು ಕಪ್ಪು ಪಟ್ಟಿ

ತಾನು ನೋಡಲು ಅರಿಯದೇ
ಇತರರನ್ನು ನೋಡಲು ಬಿಡದೇ
ಕಪಟ ನಾಟಕದ ಕನಸು ಕಾಣುತ
ಜಗವೆಲ್ಲ ಹರಡಿ ಹರಿಯುತಿಹನು

ತನ್ನ ಕಣ್ಣೆ ಕಾಣದಿದ್ದರೂ
ಚುಚ್ಚುತಿಹನು ಇತರರ ಕಣ್ಣನು
ನೆಂದ ನೆಲಕೆ ಹರಿಸುತಿಹನು
ನದಿಯಂತೆ ಕಣ್ಣೀರು, ರಕ್ತವನು

ಮನದ ಪೊರೆ ತೆಗೆ, ಅದೇ ಧರ್ಮ, ಅದೇ ಜಾತಿ
ಜಗದ ಸುಂದರ ಪ್ರಭೆಗೆ
ಬಾ ಎಂದು ಕರೆವಳು ತಾಯಿ
ಮಬ್ಬು ಮುಸುಕಿದ ಕಣ್ಣ ತೆರೆ.



■ ವಿ. ಸುನಿಲ್

## ಹಿರಿಯ ಚೇತನ - ಗೌರವ



ಹಿರಿಯ ಚೇತನ ಗೌರವ ಪಡೆದ ಶ್ರೀ ಶ್ರೀನಿವಾಸ್, ಅಧ್ಯಕ್ಷರಾದ ಶ್ರೀ ಎಸ್. ಸೋಮಸುಂದರ ಹಾಗೂ ಕಾರ್ಯದರ್ಶಿಗಳಾದ ಶ್ರೀ ವಿ.ಎಸ್. ಮಣಿ

## ನವವಿಸ್ಮಯ

'ನವ' ಎಂದರೆ ಸಂಖ್ಯೆಯಲ್ಲಿ ಒಂಬತ್ತು. ಒಂಬತ್ತಾದ ಮೇಲೆ ಅಂಕಗಣಿತದಲ್ಲಿ ಎಲ್ಲಾ ಸಂಖ್ಯೆಗಳೂ ಪುನರಾವರ್ತನೆ ಆಗುತ್ತದೆ. ಆದ್ದರಿಂದ ನಮ್ಮ ಮುಖ್ಯವಾದ ಪುರಾಣ ಗ್ರಂಥಗಳಲ್ಲಿ ಈ ಸಂಖ್ಯೆಯ ಮಹತ್ವ ಎದ್ದುಕಾಣುತ್ತದೆ. ಉದಾ: ಮಹಾಭಾರತದ ಅಕ್ಷೋಹಿಣಿ ಸೇನೆ (1+8=9) x 2. ಗೀತೆಯ ಅಧ್ಯಾಯಗಳು 18 (1+8=9, 9X2=18).

ಆಶ್ವಯುಜ ಮಾಸದ ಪಾಡ್ಯದಿಂದ ನವಮಿಯವರೆಗೆ 'ನವರಾತ್ರಿ' ನವದುರ್ಗೆಯರಾದ ಕೌಮಾರಿ, ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಂಟ, ಕೂಷ್ಮಾಂಡ, ಸ್ಕಂದಮಾತೆ, ಕಾತ್ಯಾಯನಿ, ಕಾಲರಾತ್ರಿ, ಮಹಾಗೌರಿ, ಸಿದ್ಧಿಧಾತ್ರಿಯನ್ನು ಆ ಸಮಯದಲ್ಲಿ ಆರಾಧಿಸುತ್ತಾರೆ.

ಶ್ರೀಮದ್ ಭಾಗವತದಲ್ಲಿ ಪ್ರಹ್ಲಾದನು ನವವಿಧ ಭಕ್ತಿಯ ವಿಚಾರ ತಿಳಿಸುತ್ತಾನೆ. ಅವು ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನ.

**ಆಚರಿಸಿದ ಮಹಾನ್ ವ್ಯಕ್ತಿಗಳು**

ಶ್ರವಣ – ಭಾಗವತ ಶ್ರವಣ ಮಾಡಿದ ಪರೀಕ್ಷಿತ್.
ಕೀರ್ತನ – ನಾಮ ಸಂಕೀರ್ತನೆ ಮಾಡಿದ ದಾಸ ಪರಂಪರೆ.
ಸ್ಮರಣ – ಶ್ರೀರಾಮಚಂದ್ರನ ಸ್ಮರಣೆ ಮಾಡಿದ ಶಬರಿ.
ಪಾದಸೇವನ – ತಂದೆತಾಯಿಗಳ ಪಾದಸೇವೆ ಮಾಡಿದ ಪುಂಡಲೀಕ.
ಅರ್ಚನ – ಭಗವಂತನನ್ನು ಅರ್ಚಿಸಿದ ಪೃಥು ಚಕ್ರವರ್ತಿ.
ವಂದನ – ನಿರಂತರ ವಂದನೆಗೆ ವಿದುರ, ವಿಭೀಷಣ, ಅಕ್ರೂರ.
ದಾಸ್ಯ – ದಾಸ್ಯವೃತ್ತಿ ಮಾಡಿದ ಆಂಜನೇಯ.
ಸಖ್ಯ – ಭಗವಂತನ ಸಖ್ಯ ಮಾಡಿದ ಅರ್ಜುನ, ಗುಹ, ಸುಧಾಮ.
ಆತ್ಮನಿವೇದನ – ಆತ್ಮಾರ್ಪಣೆ ಮಾಡಿದ ಬಲಿಚಕ್ರವರ್ತಿ.

ನವರಸಗಳು ಶೃಂಗಾರ, ವೀರ, ಕರುಣ, ಹಾಸ್ಯ, ರೌದ್ರ, ಭಯಾನಕ, ಭೀಭತ್ಸ, ಅದ್ಭುತ, ಶಾಂತ.

| ನವಗ್ರಹ | ನವರತ್ನ | ನವಧಾನ್ಯ |
|---|---|---|
| ಸೂರ್ಯ | ಮಾಣಿಕ್ಯ | ಗೋಧಿ |
| ಚಂದ್ರ | ಮುತ್ತು | ಅಕ್ಕಿ |
| ಕುಜ | ಹವಳ | ತೊಗರಿ |
| ಬುಧ | ಮರಕತ | ಹೆಸರು |
| ಗುರು | ಪುಷ್ಯರಾಗ | ಕಡಲೆ |
| ಶುಕ್ರ | ವಜ್ರ | ಅವರೆ |
| ಶನಿ | ನೀಲಮಣಿ | ಎಳ್ಳು |
| ರಾಹು | ಗೋಮೇದಕ | ಉದ್ದು |
| ಕೇತು | ವೈಢೂರ್ಯ | ಹುರುಳಿ |

*(ಇದು ಇವರ ಅಂತಿಮ ಲೇಖನ)*



■ ಅಚಲಾ ರಮೇಶ್

# ಸಾಮೂಹಿಕ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ – 1–12–2013










## ಓದುಗರ ಪತ್ರಗಳು




*ಮಾನ್ಯರೆ,*

ಲಲಿತಮ್ಮ ಡಾ. ಚಂದ್ರಶೇಖರ ಮಾಡುವ ವಂದನೆಗಳು.

ಈಗ್ಗೆ ನಾಲ್ಕು ದಿನಗಳ ಹಿಂದೆ ನಮ್ಮ ಆತ್ಮೀಯ ಸ್ನೇಹಿತೆ ಡಾ. ವಿಜಯ ಲಕ್ಷ್ಮಮ್ಮನವರು, ತಂದಿದ್ದ. 'ಬೃಹಚ್ಚರಣ' ಸಂಚಿಕೆ ನೋಡಿದೆ.

ಆ ಸಂಚಿಕೆಯಲ್ಲಿ ಈಗ್ಗೆ ಐವತ್ತು, ಅರವತ್ತು ವರ್ಷದ ಹಿಂದಿನ ಕುಟುಂಬಗಳ 'ಗ್ರೂಪ್' ಫೋಟೋ ನೋಡಿ ತುಂಬಾ ಸಂತೋಷವಾಯ್ತು.

ಅಂದಿನ ಜನರ ಜೀವನದ ರೀತಿ ನೀತಿ, ಅವರ ಉಡುಪು, ತೊಡವುಗಳು, ಸಂಪ್ರದಾಯ, ಎಲ್ಲವೂ ಆ ಭಾವಚಿತ್ರಗಳಲ್ಲಿ ಪ್ರತಿಬಿಂಬಿತ ವಾಗುತ್ತವೆ.

ಅವರಲ್ಲಿ ಕೆಲವರ ಹೆಸರುಗಳನ್ನು ನನ್ನ ಅತ್ತೆಯವರು ಗೌರಮ್ಮನವರ ಬಾಯಿಂದ ಅರವತ್ತೇಳು ವರ್ಷದ ಹಿಂದೆ ಕೇಳಿದ್ದೆ.

ನನ್ನ ಮಾವನವರು ವೇ.ಬ್ರ.ಶ್ರೀ. ರಾಮಶಾಸ್ತ್ರಿಗಳು 'ಬೃಹಚ್ಚರಣ' ಪಂಗಡದವರ ಪುರೋಹಿತವಾಗಿದ್ದರು.

ಡಾ. ಡಿ.ವಿ.ಜಿ. ಅವರು ಆ ಬಗ್ಗೆ 'ಸವಿನೆನಪು' ಎಂಬ ಗ್ರಂಥದಲ್ಲಿ ಐದಾರು ಪಂಕ್ತಿ ಬರೆದಿದ್ದಾರೆ.

ಈ ತಿಂಗಳ ಸಂಚಿಕೆಯಲ್ಲಿ ಬಂದಿರುವ "ಲಕ್ಷ್ಮಣ ಐಯ್ಯರ್" ಅವರ ಭಾವಚಿತ್ರ ಕಂಡಾಗ ಚಾಮರಾಜಪೇಟೆಯ ಮೂರನೇ ಮುಖ್ಯರಸ್ತೆಯಲ್ಲಿ ಇದ್ದ ಸೂರಮ್ಮನವರ ಅಳಿಯಂದಿರು. 'ಲಕ್ಷ್ಮಣ' ಅವರು, 'ಲಕ್ಷ್ಮಣ' ಅವರ ಪತ್ನಿಗೌರಮ್ಮ ನಮ್ಮ ಅತ್ತೆಯವರನ್ನು ನೋಡಿ ಮಾತನಾಡಲು ಅಗಾಗ ಭದ್ರಾಶಯದಿಂದ ಬರುತ್ತಿದ್ದ ನೆನಪು ಬಂತು.

ಇದರ ಜೊತೆಗೆ 'ಅತ್ಯಂತ ದುಃಖವಾದ ವಿಚಾರ.' ಎಂದರೆ ಪುಟ್ಟ ಹುಡುಗಿ ಅಚಲ ರಮೇಶ. ಅತಿ ಚಿಕ್ಕವಯಸ್ಸಿನಲ್ಲಿ ಪರಮಾತ್ಮನ ಪದಾರವಿಂದಗಳಿಗೆ ತೆರಳಿ ವಿಧಿವಶವಾದ ವಿಚಾರ ತುಂಬಾ ವ್ಯಥೆಯನ್ನು ತಂದಿತು.

ಎಂಜನೀಯರ್ ಪದವೀಧರೆಯಾಗಿ ಜತೆ ಲೇಖಕಿಯೂ ಆಗಿ ಅವಳೇ ಬರೆದ ಲೇಖನ 'ಬೃಹಚ್ಚರಣ' ಪತ್ರಿಕೆಯಲ್ಲಿ ಅಚ್ಚಾಗಿದ್ದು ಕಂಡು ತುಂಬಾ ಸಂಕಟವಾಯಿತು.

ಅತ್ಯಂತ ಬೌದ್ಧಿಕ ಮಟ್ಟದಲ್ಲಿ ಪ್ರೌಢಿಮೆಯಿಂದ ಅಚಲ ರಮೇಶ ಬರೆದ ಲೇಖನ ಓದಿದಾಗ ಈ ಹುಡುಗಿ ಬಯಸಿದ್ದರೆ ಮುಂದೆ ಅದೆಂತಹ ಮಹಾನ್ ಲೇಖಕಿಯಾಗುತ್ತಿದ್ದಳು ಎಂದು ನನ್ನ ಕಣ್ಣು ಹನಿ ಗೂಡಿತು. ಪರಮಾತ್ಮನು ಅವರ ಕುಟುಂಬ ವರ್ಗಕ್ಕೆ ಶಾಂತಿ ಸಮಾಧಾನ ಕೊಡಲಿ. ಅಚಲಾ ರಮೇಶ್ ಚಾಮರಾಜಪೇಟೆಯ ಪರಮಶಿವಯ್ಯನವರ ಮಗ ರಾಮಕೃಷ್ಣ ಅವರ ಮೊಮ್ಮಗಳು. ಲಲಿತಾ ಮಗಳು ನಮ್ಮ ಗೆಳತಿ ಡಾ. ವಿಜಯಲಕ್ಷ್ಮಮ್ಮನವರ 'ಅಣ್ಣನ ಮೊಮ್ಮಗಳು' ಎಂದು ತಿಳಿದಾಗ ನನಗಾದ ಸಂಕಟ ಹೇಳಲಾರೆ.

ಸಂಗೀತ, ಸಾಹಿತ್ಯ, ಕಲೆ, ವಿದ್ಯೆ ಎಲ್ಲದರಲ್ಲಿಯೂ ಅತ್ಯಂತ ಪರಿಣಿತಿ ಪಡೆದಿದ್ದ ಅಚಲ ರಮೇಶ ನಿಧನ ತುಂಬಲಾರದ ನಷ್ಟವಾಗಿದೆ.



■ ಲಲಿತಮ್ಮ ಡಾ. ಚಂದ್ರಶೇಖರ

*The Hon. Editor Bruhacharana*

*Sir,*

*The print layout, contents in brief has comeout designfully in volume 3, issue 2 of the quarterly issue April to June, 2013.*

*Thanks to the thought makers.*

***Salem V. Subramanyam***

## ನಮ್ದೆ ವಾತೇಲೆ ಕಗ್ಗ–ಇದೋದು ಒಣರಗಳೆ

ಕಾತು ಮಣ್ಣೆ ಉಂಡೇಲೆ ಪೋಯಿ ಹೊರಳಾಡಿನಕ ಅದು ।
ಮನುಷ್ಯ ಅನ್ವೀಚ್ಕೊಳುದ್ದೆ, ಇಲ್ಲಾಟ್ಕ ಅದು ಒರೂ ಹೆಂಟೆ ॥
ಪಳಪೋದು ಧೂಳಿ ಸುಳಿ, ಮರು ತೇಚಿರ್‌ಂದ್ ಎರಿದೆ ಪೊಗೆ।
ವಿಷು ಓದು ಅಮೃತು ಓದು –ಮಂಕುತಿಮ್ಮ ॥**19**॥

ಪಾತ್ ಸ್ವಾಮಿಗಳಕೆಲ್ಲ ಕೈ ಮುಗಿಂಜಿ ಓದಾಗುದ್ದೆ? ।
ಚಂಡ ಚತುರೋಪಾಯ್ತಿ ಅನ್ನು ಓದಾಗುದ್ದೆ? ॥
ಅರಸಿಪಿಡಿ ಒನ್ನು ತುಂಡುಪೂರ್ಲು ಒನ್ನು ।
ಅಂಡಲೆತು ಇದಕು ತಾನೆ –ಮಂಕುತಿಮ್ಮ ॥**20**॥

ಚಿನ್ನು ಅನ್ನುಟ್ಟು ಪ್ರಪಂಚುತ್ತೆ ನೀಕ್ಕೈಕು ವಾಂಕುಂಡ್ತೆ ವಿಧಿ ।
ಮಣ್ಣು ಅಂಗ್ರಾಂದೆ; ಅವಂದೆ ವರಮೆ ಮಣ್ಣು ಅಂಗ್ರಾದೆ ನೀ ॥
ಭಿನ್ನು ಇಷ್ಡಿರಕ್ರಪ್ಪೊ ವಸ್ತುಗಳಿ ವೆಲೆಯೆ ಲೆಕ್ಕು ಪೋಡುದ್ದು ।
ವ್ಯಾಪರ್ತಿ ಗತಿ ಒಪ್ಡೆ –ಮಂಕುತಿಮ್ಮ ॥**21**॥

ಪೊಯ್ಯಿ ಪ್ರಪಂಚು ಎಲ್ಲ । ಸತ್ಯು ಒಂಗೆ ಅದೇಡಾ? ।
ಕರ್ತು ಅನ್ವೀಚ್ಕುಂಡ್ವು ತಾನೇ ಗುಪ್ತಮೆ ಅವ್ನೆ ॥
ವಿಚಿತ್ರು ಇಂದ್ ಪ್ರಪಂಚು ದಾರದೆ ಗುಣು ಒಪ್ದಡ್ಯೊ ।
ಯಾತ್ರಿಕನೇ, ಹುಷಾರೆ ಇರು –ಮಂಕುತಿಮ್ಮ ॥**22**॥

ತಿರಂಬಿ ತಿರಂಬಿ ತೊಳಲುದ್ದು ತಿರಿಂಜಿ ಅನ್ನು ತಿಂಗುದ್ದು ।
ಮೆರಂಜಿ ಮೈಮರಕುದ್ದು ಪಲ್ ಗಿಂಜುದ್ದು ॥
ತಿರಂಬಾ ಕೊರಗಾಡುದ್ದು ಕೆರಳುದ್ದು ನರಳುದ್ದು ।
ಪಳಪು ಇದೋದು ಒಣರಗಳೇ? –ಮಂಕುತಿಮ್ಮ ॥**23**॥

■ ಭಾಮ

Book-Post

To, ______________________

______________________

______________________

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026.